# ಹಂಪಿ ಟೈಮ್ಸ್
## HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 91 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 04.10.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 91 • PRGI No:KARKAN/2023/88055 • VIJAYANAGARA • 04.10.2024 • Friday • Page:04 • Rs:2













# ಅಂಗನವಾಡಿಗಳಿಗೆ ಸ್ಮಾರ್ಟ್ ಟಿವಿ ಕೊಡುಗೆ

## ಗ್ರಾಪಂ ಅಧ್ಯಕ್ಷ ಜಯಪದ್ಮಾ ಹೇಳಿಕೆ | ಅಂಗನವಾಡಿಯತ್ತ ಸಮುದಾಯ | ಪಾಲಕ-ಪೋಷಕರ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಚಿತವಾಡಗಿ 1ನೇ ವಲಯದ ಹೊಸೂರು 1 ಮತ್ತು 2ನೇ ಅಂಗನವಾಡಿ ಕೇಂದ್ರದಲ್ಲಿ ಅಂಗನವಾಡಿಯತ್ತ ಸಮುದಾಯ ಪಾಲಕ ಪೋಷಕರ ಸಭೆ ಗುರುವಾರ ನಡೆಯಿತು.

ಹೊಸೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಜಯಪದ್ಮಾ ಅವರು ಸ್ಮಾರ್ಟ್ ಟಿವಿಯನ್ನು ಉದ್ಘಾಟಿಸಿ ಮಾತನಾಡಿ, ಸಣ್ಣಕ್ಕಿ ಲಕ್ಷ್ಣ ರವರು ನಮ್ಮ ಗ್ರಾಮ ಪಂಚಾಯತಿ ಸದಸ್ಯರಲ್ಲೆ ಅತ್ಯಂತ ಕ್ರಿಯಾಶಿಲ ವ್ಯಕ್ತಿ ಹಾಗೂ ಸದಸ್ಯರು. ಇವರು ನಮಗೆಲ್ಲರಿಗೂ ಪ್ರೇರಣೆಯಾಗಿದ್ದಾರೆ. ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸ್ಮಾರ್ಟ್ ಟಿವಿ ವಿತರಣೆಗೆ ಕ್ರಮವಹಿಸಲಾಗುದು. ಅಂಗನವಾಡಿ ಕೇಂದ್ರಗಳಿಗೆ ಸಿಸಿಟಿವಿ ಅಳವಡಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ಹೇಳಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಸಿಂದೂ ಅಂಗಡಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗನವಾಡಿ ಕೇಂದ್ರಕ್ಕೆ ಬರುವಂತಹ ಮಕ್ಕಳ ಕಲಿಕೆಗೋಸ್ಕರ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಸಮುದಾಯದ ಪಾಲ್ಗೊಳ್ಳುವಿಕೆಯು ಅತ್ಯಂತಹ ಮಹತ್ವದ್ದಾಗಿದ್ದು, ಸಮುದಾಯವು ಯಾವಾಗ ಮಕ್ಕಳ ಕಲಿಕೆಗೆ ಹಾಗೂ ಅಂಗನವಾಡಿ ಅಭಿವೃದ್ಧಿಗೆ ಶ್ರಮಿಸುತ್ತದೆ ಆಗ ಮಕ್ಕಳ ಕಲಿಕೆ ಸಧೃಡವಾಗುತ್ತೆ. ಇದರ ಜೊತೆ ಅಂಗನವಾಡಿಯು ಸಹ ಬೆಳೆಯುತ್ತೆ. ಅದಕ್ಕೆ ಇಂದು ನಮ್ಮ ಅಂಗನವಾಡಿ ಕೇಂದ್ರಗಳಿಗೆ ಮಗುವಿನ ಪೋಷಕರು ಹಾಗೂ ಹೊಸೂರು ಗ್ರಾಮ ಪಂಚಾಯತಿ ಸದಸ್ಯರಾದ ಸಣ್ಣಕ್ಕಿ ಲಕ್ಷ್ಣ ಅವರು ಅತ್ಯಾಧುನಿಕ ಸ್ಮಾರ್ಟ ಟಿವಿಯನ್ನು ಕೊಡುಗೆ ನೀಡಿರುವುದು ಒಳ್ಳೆಯ ನಿದರ್ಶನವಾಗಿದೆ ಎಂದರು.



**ಅಂಗನವಾಡಿಗಳಿಗೆ ಸ್ಮಾರ್ಟ್ ಟಿವಿ:** ಅಂಗನವಾಡಿ ಕೇಂದ್ರದ ಮಗುವಿನ ಪೋಷಕರು ಹಾಗೂ ಗ್ರಾಮ ಪಂಚಾಯತಿ ಸದಸ್ಯರಾದ ಸಣ್ಣಕ್ಕಿ ಲಕ್ಷ್ಣ ಅವರು ಅಂಗನವಾಡಿಗಳಿಗೆ ಸ್ಮಾರ್ಟ್ ಟಿವಿ ವಿತರಣೆ ಮಾಡಿದರು.

ಸಭೆಯಲ್ಲಿ ಗ್ರಾಮ ಪಂಚಾಯತಿ ಸದಸ್ಯರು ಅಂಗನವಾಡಿ ಮಗುವಿನ ಪೋಷಕರಾದ ಸಣ್ಣಕ್ಕಿ ಲಕ್ಷ್ಣ, ಚಿತವಾಡಗಿ 1ನೇ ವಲಯದ ಮೇಲ್ವಿಚಾರಕಿಯಾದ ಎಲ್.ಡಿ.ನಧಾಫ್, ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಅಧಿಕಾರಿಗಾಳಾದ ಕೊಟ್ರೇಶ ಯರಡಕೇರಿ, ಹಲೋ ಪೋಷಕರೆ ಕಾರ್ಯಕ್ರಮದ ಸಂಯೋಜಕರಾದ ಅರ್ಜುನ್, ಹೊಸ್ಸೂರು ಅಂಗನವಾಡಿ ಕೇಂದ್ರದ ಅಂಗನವಾಡಿ ಕಾರ್ಯಕರ್ತೆಯರಾದ ನೇತ್ರಾವತಿ ಹಾಗೂ ಯಶೋದಾ, ಅಂಗನವಾಡಿ ಶಿಕ್ಷಕಿಯಾದ ನೇತ್ರಾವತಿ, ಯಶೋಧ ಮತ್ತು ಅಂಗನವಾಡಿ ಮಕ್ಕಳು ಹಾಗೂ ಪೋಷಕರು ಭಾಗಿಯಾಗಿದ್ದರು.

## ನಿತ್ಯ ಪಂಚಾಂಗ

ಮಾಸ: ಆಶ್ವೀಜ | ಸಂವತ್ಸರ: ಕ್ರೋಧಿ

04-10-2024 – ಶುಕ್ರವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತ |
| ಯೋಗ | : ವೈಧೃತಿ |
| ಕರಣ | : ಬಾಳವ |
| ಸೂರ್ಯೋದಯ | : 06:20:46 |
| ಸೂರ್ಯಾಸ್ತ | : 18:09:55 |
| ರಾಹು ಕಾಲ | : 10:47–12:15 |
| ಯಮಘಂಡ ಕಾಲ | : 15:13–16:41 |
| ಗುಳಿಕ ಕಾಲ | : 07:49–09:18 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 03-10-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.90 ಅಡಿ |
| ಒಳ ಹರಿವು | 10203 ಕ್ಯುಸೆಕ್ |
| ಹೊರ ಹರಿವು | 10176 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.382 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1617.37 ಅಡಿ |
| ಒಳ ಹರಿವು | 1825 ಕ್ಯುಸೆಕ್ |
| ಹೊರ ಹರಿವು | 9728 ಕ್ಯುಸೆಕ್ |
| ಸಾಮರ್ಥ್ಯ | 54.267 ಟಿಎಂಸಿ |

# ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

## ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಹೇಳಿಕೆ | ಪೂರ್ವ ಸಿದ್ಧತಾ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.17ರಂದು ಜಿಲ್ಲಾಕೇಂದ್ರದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.



ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಹರ್ಷಿ ವಾಲ್ಮೀಕಿಜಯಂತಿ ಆಚರಣೆ ಸಂಬಂಧ ಗುರುವಾರ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು. ಅಂದು, ಬೆಳಿಗ್ಗೆ 09 ಗಂಟೆಗೆ ಎಸ್‌ಪಿ ವೃತ್ತದ ಬಳಿಯಿರುವ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆಗೆ ಮಾಲಾರ್ಪಣೆ ನೆರವೇರಿಸಿ, ವಿವಿಧ ಕಲಾ ತಂಡಗಳಿಂದ ಭವ್ಯ ಮೆರವಣಿಗೆಗೆ ನಡೆಯಲಿದೆ ಎಂದರು.

ಮೆರವಣಿಗೆಯು ಎಸ್‌ಪಿ ವೃತ್ತದಿಂದ ಆರಂಭವಾಗಿ ದುರ್ಗಮ್ಮ ದೇವಸ್ಥಾನ- ಗಡಿಗಿ ಚೆನ್ನಪ್ಪ ವೃತ್ತ - ಬೆಂಗಳೂರು ರಸ್ತೆ- ಬ್ರೂಸ್ ಪೇಟೆ ಪೊಲೀಸ್ ಠಾಣೆ ಮುಂಭಾಗ- ಹೆಚ್. ಆರ್.ಗವಿಯಪ್ಪ ವೃತ್ತ-ಡಾ.ಜೋಳದ ರಾಶಿ ದೊಡ್ಡನಗೌಡ ರಂಗಮಂದಿರ ಮುಂಭಾಗ ದಿಂದ ವಾಲ್ಮೀಕಿ ಭವನದ ವೇದಿಕೆ ಕಾರ್ಯಕ್ರಮದವರೆಗೆ ನಡೆಯಲಿದೆ. ಬಳಿಕ, ವಾಲ್ಮೀಕಿ ಭವನದ ಆವರಣದಲ್ಲಿರುವ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು ಎಂದರು. ಹೇಳಿದರು. ಬೆಳಿಗ್ಗೆ 11 ಗಂಟೆಗೆ ನಡೆಯುವ ಜಯಂತಿಯ ವೇದಿಕೆ ಕಾರ್ಯಕ್ರಮಕ್ಕೆ ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಶಿಷ್ಠಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ, ಗಣ್ಯರನ್ನು ಆಹ್ವಾನಿಸಲಾಗುವುದು. ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತಾ ಕಾರ್ಯ ಕೈಗೊಳ್ಳುವಂತೆ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಿ ವಿವಿಧ ಇಲಾಖೆ ಅಧಿಕಾರಿಗಳಿಗೆ ವಹಿಸಿದ ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸೂಚಿಸಿದರು.

ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟನಲ್ಲಿ ಸಮಾಜದ ಬಾಂಧವರು ಸೇರಿದಂತೆ ಇತರರು ಕಾರ್ಯಕ್ರಮ ಯಶಸ್ವಿಗೆ ಕೈಜೋಡಿಸಬೇಕು. ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳು, ಸಮುದಾಯದ ಮುಖಂಡರು ಪಾಲ್ಗೊಂಡು ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸುವಂತೆ ಅಪರ ಜಿಲ್ಲಾಧಿಕಾರಿಯವರು ಮನವಿ ಮಾಡಿದರು.

ಜಿಲ್ಲೆಯ ಪರಿಶಿಷ್ಟ ಪಂಗಡ ಸಮುದಾಯದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅಧಿಕ ಅಂಕ ಪಡೆದವರಿಗೆ ಮತ್ತು ಪಿಹೆಚ್‌ಡಿ ಪದವಿ ಪಡೆದವರಿಗೆ, ಹಾಗೆಯೇ ಸಮುದಾಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಗುವುದು. ಹಾಗೆಯೇ ವಾಲ್ಮೀಕಿ ಜಯಂತಿಯಂದು ಭಾಷಣ ಮಾಡಲು ವಿಶೇಷ ಆಹ್ವಾನಿತರ ಹೆಸರು ಸೂಚಿಸುವಂತೆಸಮುದಾಯದ ಮುಖಂಡರಲ್ಲಿ ಕೋರಲಾಯಿತು.

ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಮುಖಂಡರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸ ಬೇಕು ಎಂದು ತಿಳಿಸಿದರು. ಇದೇ ಸಂದರ್ಭ ದಲ್ಲಿ ಸಮಾಜದ ಮುಖಂಡರು ವಾಲ್ಮೀಕಿ ಜಯಂತಿ ಅರ್ಥ ಪೂರ್ಣ ಆಚರಣೆ ಮಾಡುವ ಬಗ್ಗೆ ಹಲವು ಮಾಹಿತಿ ನೀಡಿದರು. ಕಾರ್ಯಕ್ರಮ ಅಚ್ಚುಕಟ್ಟು ವ್ಯವಸ್ಥೆಗೆ ಹಲವು ಸಲಹೆ, ಮಾರ್ಗದರ್ಶನ ನೀಡಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಪ್ರಮೋದ್ ಕುಮಾರ್, ಬಳ್ಳಾರಿ ನಗರ ಡಿಎಸ್ಪಿ ಚಂದ್ರಕಾಂತ ನಂದಾರೆಡ್ಡಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಮಾಜದ ಮುಖಂಡರು ಹಾಗೂ ಇತರರು ಉಪಸ್ಥಿತರಿದ್ದರು.

# ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಸೋದೆ ಸದಾಶಿವರಾಯ ಪ್ರಶಸ್ತಿಗೆ ಆಯ್ಕೆ

■ ಹಂಪಿ ಟೈಮ್ಸ್ ಹೊಸಪೇಟೆ



ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಸಂಶೋಧಕರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಈ ವರ್ಷದ ಸೋದೆ ಸದಾಶಿವರಾಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಸೋಂದಾ ಇತಿಹಾಸೋತ್ಸವದ ಸಂಚಾಲಕ ಇತಿಹಾಸಕಾರ ಡಾ.ಲಕ್ಷ್ಮೀಶ್ ಹೆಗಡೆ ಸೋಂದಾ ತಿಳಿಸಿದ್ದಾರೆ.

ಇತಿಹಾಸ ಸಂಶೋಧನಾ ಕ್ಷೇತ್ರಕ್ಕೆ ಮತ್ತು ವಿದ್ವತ್ಪ್ರಪಂಚಕ್ಕೆ ನೀಡಿದ ಕೊಡುಗೆಗಳ ಅನುಸಾರ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಸೋದೆ ಸದಾಶಿವರಾಯ ಈ ನಾಡು ಕಂಡ ಮೇಧಾವಿ ಮತ್ತು ಪಂಡಿತ ಅರಸು, ಆ ಕಾಲದಲ್ಲೇ 21 ಕೃತಿಗಳನ್ನು ಸಾರಸ್ವತ ಲೋಕಕ್ಕೆ ನೀಡಿದ ಸಾಹಿತಿ. ಇಂತಹ ಒಬ್ಬ ವಿದ್ವಾಂಸ ದೊರೆಯ ಹೆಸರಿನಲ್ಲಿ ಕೊಡುವ ಈ ಪ್ರಶಸ್ತಿಗೆ ಈ ವರ್ಷ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಮತ್ತು ಶ್ರೇಷ್ಠ ವಿದ್ವಾಂಸರಾದ ಡಾ.ಡಿ.ವಿ.ಪರ ಮಶಿವಮೂರ್ತಿಯವರನ್ನು ಆಯ್ಕೆ ಮಾಡಲಾಗಿದೆ.

ನಾಡಿನ ಪ್ರತಿಷ್ಠಿತ ಸೋಂದಾ ಇತಿಹಾಸೋತ್ಸವ ಮತ್ತು ರಾಜ್ಯಮಟ್ಟದ ಇತಿಹಾಸ ಸಮ್ಮೇಳನ ಹಾಗು ಸೋದೆ ಸದಾಶಿವರಾಯ ಪ್ರಶಸ್ತಿ ಪ್ರದಾನ ಸಮಾರಂಭ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೋಂದಾದ ಸ್ವಾದಿ ಜೈನ ಮಠದಲ್ಲಿ ಅ.19 ಮತ್ತು 20ರಂದು ನಡೆಯಲಿದೆ. ಅ.19 ರಂದು ಸೋಂದಾ ಇತಿಹಾಸೋತ್ಸವದಲ್ಲಿ ಸ್ವರ್ಣವಲ್ಲೀ ಸ್ವಾಮೀಜಿ ಮತ್ತು ಸ್ವಾದಿ ಜೈನಮಠದ ಸ್ವಾಮೀಜಿ ಹಾಗು ಹಲವಾರು ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರಶಸ್ತಿ ಪ್ರದಾನ ನೆರವೇರಲಿದೆ. ಪ್ರಶಸ್ತಿಯು 10 ಸಾವಿರ ನಗದು, ಸ್ಮರಣಿಕೆ, ಸನ್ಮಾನ ಪತ್ರ, ಹಾಗೂ ವಿಶೇಷವಾಗಿ ಸೋದೆ ಅರಸರ ಪೇಟವನ್ನು ಒಳಗೊಂಡಿದೆ ಎಂದು ಸಂಚಾಲಕರು ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಗಳಡಿಯಲ್ಲಿ ಆರೋಗ್ಯ ಇಲಾಖೆಯಿಂದ ವಿಜಯನಗರ ಜಿಲ್ಲೆಯ ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಆರೋಗ್ಯ ನಿರೀಕ್ಷಣಾಧಿಕಾರಿ 1 ಹುದ್ದೆ, ಕಿರಿಯ ಆರೋಗ್ಯ ಸಹಾಯಕರು (ನಮ್ಮ ಕ್ಲಿನಿಕ್) 06 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ ಈ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆ ಪಟ್ಟಿ ತಿರಸ್ಕೃತ ಅರ್ಜಿಗಳ ಪಟ್ಟಿಗಳನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಕ್ಟೋಬರ್ 9ರ ಸಂಜೆ 5:30 ಗಂಟೆಯೊಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೃದಯದ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ

## ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣ ಅಧಿಕಾರಿ ಡಾ.ಲಿಂಗರಾಜು.ಟಿ ಹೇಳಿಕೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ಎನ್.ಸಿ.ಡಿ. ಕೋಶ ಮತ್ತು ಜಿಲ್ಲಾ ಬೋಧಕ ಆಸ್ಪತ್ರೆ ಹಾಗೂ ಜಿಲ್ಲಾ ಎನ್.ಸಿ.ಡಿ. ಕ್ಲಿನಿಕ್ ಹಾಗೂ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜ ಯುವ ರೆಡ್‌ಕ್ರಾಸ್ ಘಟಕ ವತಿಯಿಂದ ವಿಶ್ವ ಹೃದಯ ದಿನದ ಕುರಿತು ಜಾಗೃತಿ ಕಾರ್ಯಕ್ರಮವು ಇತ್ತೀಚೆಗೆ ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನಲ್ಲಿ ನಡೆಯಿತು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಲಿಂಗರಾಜು ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಬಳಿಕ ಮಾತನಾಡಿದ ಅವರು ಹೃದಯವು ಮಾನವ ದೇಹದ ಪ್ರಮುಖ ಅಂಗಾಗಳಲ್ಲಿ ಒಂದಾಗಿದೆ. ಅದರ ಅಸಮರ್ಪಕ ಕಾರ್ಯವು ಮಾರಣಾಂತಿಕತೆಗೆ ಕಾರಣವಾಗಬಹುದು ಆದಕಾರಣ ಪ್ರತಿಯೊಬ್ಬರು ಹೃದಯದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಬಹಳ ಅವಶ್ಯಕವಾಗಿರುತ್ತದೆ. ಅರಂಭಿಕ ಚಿನ್ಹೆಗಳು ರೋಗ ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವುದು, ತೊಡಕುಗಳನ್ನು ತಪ್ಪಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಜಡ ಜೀವನ ಶೈಲಿಯನ್ನು ತಪ್ಪಿಸುವುದು, ಸಾಕ್ರೀಯ ಜೀವನ ಶೈಲಿಯ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

# ಕ.ಕ.ರ.ಸಾ.ನಿಗಮದ ನೂತನ ವಾಹನಗಳಿಗೆ ಜನಮಾನಸ ನಾಣ್ನುಡಿಗಳ ಅನಾವರಣ, ಅಳವಡಿಕೆ



■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆಯ ಕೊಟ್ಟೂರು ನಿವಾಸಿ ಖ್ಯಾತ ಸಾಹಿತಿಗಳು, ಲೇಖಕರಾದ ಡಾ ಕುಂ.ವೀರಭದ್ರಪ್ಪ ಹಾಗೂ ಕಲಬುರಗಿ ಕ.ಕ.ರ.ಸಾ.ನಿಗಮ, ಕೇಂದ್ರ ಕಚೇರಿಯ ವ್ಯವಸ್ಥಾಪಕ ನಿರ್ದೇಶಕರಾದ ಎನ್.ರಾಚಪ್ಪ ಅವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಹೊಸಪೇಟೆ ವಿಭಾಗದಲ್ಲಿ ಅಕ್ಟೋಬರ್ 01ರಂದು ನಿಗಮದ ನೂತನ ವಾಹನಗಳಿಗೆ ಜನಮಾನಸ ನಾಣ್ನುಡಿಗಳ ಅನಾವರಣ ಹಾಗೂ ಅಳವಡಿಕೆ ಕಾರ್ಯಕ್ರಮ ನಡೆಯಿತು.

**ಸನ್ಮಾನ:** ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಾ ಕುಂ.ವೀರಭದ್ರಪ್ಪ ಅವರಿಗೆ ಸನ್ಮಾನ ಮಾಡಲಾಯಿತು. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ ಆನಂದ ಭಂದ್ರಕಾಳಿ, ಕ.ಕ.ರ.ಸಾ.ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ ಸೇರಿದಂತೆ ನಿಗಮದ ಕೇಂದ್ರ ಕಚೇರಿಯ ಇಲಾಖಾ ಮುಖ್ಯಸ್ಥರು, ಸಂಸ್ಥೆಯ ಅಧಿಕಾರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕೊಟ್ಟ ಮಾತಿನಂತೆ ರಾಜ್ಯದ ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ತುಂಬುವ ಕಾರ್ಯ ಮಾಡುತ್ತಿದ್ದೇವೆ: ಸಿದ್ದರಾಮಯ್ಯ

■ ಹಂಪಿ ಟೈಮ್ಸ್ ಮೈಸೂರು



ಕೇವಲ ರಂಗು ರಂಗಿನ ಮಾತಿನ ಮೂಲಕ ಜನರ ಹೊಟ್ಟೆ ತುಂಬಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಚುನಾವಣೆ ಸಂದರ್ಭದಲ್ಲಿ ಕೊಟ್ಟ ಭರವಸೆಯಂತೆ ಜನಪರ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯನ್ನು ತುಂಬುವ ಕಾರ್ಯವನ್ನು ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು. ಅವರು ಇಂದು ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಚುನಾವಣಾ ಸಂದರ್ಭದಲ್ಲಿ ತಾಯಿ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ನಾನು ಮತ್ತು ಡಿ.ಕೆ.ಶಿವಕುಮಾರ್ ಅವರು ಚುನಾವಣೆಯಲ್ಲಿ ಜಯ ಗಳಿಸಿದರೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಭರವಸೆ ನೀಡಿದ್ದೆವು. ಅದರಂತೆ ಚುನಾವಣೆಯಲ್ಲಿ ಜಯ ಗಳಿಸಿದ ಎಂಟೇ ತಿಂಗಳಲ್ಲಿ ಎಲ್ಲಾ ಐದು ಯೋಜನೆಗಳನ್ನು ಜಾರಿಗೊಳಿಸಿದ್ದೇವೆ ಎಂದು ಹೇಳಿದರು.

ಗೃಹಲಕ್ಷ್ಮಿ ಯೋಜನೆಯಡಿ 1.21 ಕೋಟಿ ಕುಟುಂಬಗಳ ಯಜಮಾನಿಯರು ಪ್ರತಿ ತಿಂಗಳು ರೂ. 2ಸಾವಿರ ಮೊತ್ತ ಪಡೆಯುತ್ತಿದ್ದಾರೆ. ಗೃಹಜ್ಯೋತಿ ಯೋಜನೆಯಡಿ 1.40 ಕುಟುಂಬಗಳು ಉಚಿತ ವಿದ್ಯುತ್ ಸೌಲಭ್ಯ ಪಡೆಯುತ್ತಿವೆ. ಯುವ ನಿಧಿ ಯೋಜನೆಯಡಿ 1.82 ಲಕ್ಷ ನಿರುದ್ಯೋಗಿ ಪದವೀಧರರು ಹಾಗೂ ಡಿಪ್ಲೊಮಾದಾರರು ಆರ್ಥಿಕ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಈ ಬಾರಿ ದಸರಾ ಮಹೋತ್ಸವಕ್ಕೆ ಹಂ.ಪ. ನಾಗರಾಜಯ್ಯ ಅವರು ವಿದ್ಯುಕ್ತವಾಗಿ ಚಾಲನೆ ನೀಡಿದ್ದಾರೆ. ಅವರಿಗೆ ಈ ಮೊದಲೇ ಈ ಅವಕಾಶ ದೊರೆಯಬೇಕಿತ್ತು. ಹಂ.ಪ. ನಾಗರಾಜಯ್ಯ ಅವರು ಕನ್ನಡ ಸಾಹಿತ್ಯ ಹಾಗೂ ಜೈನ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆಯನ್ನು ಕನ್ನಡ ನಾಡಿನ ಜನ ಮರೆಯಲು ಸಾಧ್ಯವಿಲ್ಲ. ಅವರ ಆಯ್ಕೆ ಔಚಿತ್ಯಪೂರ್ಣ. ಕರ್ನಾಟಕ ಕಂಡ ಅಪರೂಪದ ಸಾಹಿತಿ ಅವರು ಎಂದರು.

ಹಂ.ಪ. ನಾಗರಾಜಯ್ಯ ಅವರು ಮೌಲ್ಯಯುತ ಭಾಷಣ ಮಾಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಸರಕಾರಗಳನ್ನು ವಾಮ ಮಾರ್ಗಗಳಲ್ಲಿ ಕಿತ್ತು ಹಾಕುವುದು ಪ್ರಜಾಪ್ರಭುತ್ವ ವಿರೋಧಿ ಎಂದು ಹೇಳಿದ್ದಾರೆ. ಇದು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳಾಗಿದ್ದು, ಪ್ರಜಾಪ್ರಭುತ್ವ ಇನ್ನಷ್ಟು ಬಲಪಡಿಸಬೇಕು ಎಂದಿರುವುದು ಔಚಿತ್ಯಪೂರ್ಣವಾಗಿದೆ.

ಜನರ ಆಶೀರ್ವಾದ ಇರುವರೆಗೆ ಆಡಳಿತ ಜನರ ಆಶೀರ್ವಾದದಿಂದ ನಾವು ಆಡಳಿತಕ್ಕೆ ಬಂದಿದ್ದೇವೆ. 5 ವರ್ಷಗಳ ಕಾಲ ರಾಜ್ಯದ ಜನತೆ ನಮಗೆ ಅವಕಾಶ ಕೊಟ್ಟಿದ್ದಾರೆ. ಈಗಲೂ ಎಷ್ಟೇ ತೊಡಕುಗಳು ಎದುರಾದರೂ, ತಾಯಿ ಚಾಮುಂಡೇಶ್ವರಿ ಆಶೀರ್ವಾದ ನಮ್ಮ ಮೇಲಿದೆ. ಐದು ವರ್ಷಗಳ ಕಾಲ ನಾವು ಆಡಳಿತ ಮಾಡಿಯೇ ಮಾಡುತ್ತೇವೆ.

ಚಾಮುಂಡೇಶ್ವರಿ ತಾಯಿ ಹಾಗೂ ಇಲ್ಲಿನ ಜನರ ಆಶೀರ್ವಾದದಿಂದಲೇ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ಇಲ್ಲಿಯವರೆಗೆ ಯಾವುದೇ ತಪ್ಪು ಮಾಡಿಲ್ಲ. ತಪ್ಪು ಮಾಡಿದ್ರೆ ಇಷ್ಟು ದೀರ್ಘಕಾಲ ರಾಜಕಾರಣದಲ್ಲಿ ಇರಲು ಸಾಧ್ಯವಿರಲಿಲ್ಲ.

ನನಗೆ ನ್ಯಾಯಾಲಯಗಳಲ್ಲಿ ನಂಬಿಕೆಯಿದೆ. ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಗಾಂಧೀಜಿ ಅವರು ಹೇಳಿದಂತೆ ಆತ್ಮಸಾಕ್ಷಿ ನ್ಯಾಯಾಲಯ ಎಲ್ಲಾ ನ್ಯಾಯಾಲಯಗಳಿಗಿಂತ ಮಿಗಿಲಾದುದು. ಆತ್ಮಸಾಕ್ಷಿಗೆ ತಕ್ಕಂತೆ ನಡೆದಿದ್ದೇನೆ ಎಂಬ ದೃಢ ನಂಬಿಕೆ ಇದೆ ಎಂದು ಹೇಳಿದರು. ಪರಸ್ಪರರನ್ನು ಪ್ರೀತಿಸಬೇಕೆ ಹೊರತು ಯಾರನ್ನೂ ದ್ವೇಷಿಸಬಾರದು. ಎಲ್ಲಾ ಧರ್ಮಗಳು ಪರಸ್ಪರ ಪ್ರೀತಿಸಿ ಮಾನವರಾಗಿ ಬಾಳುವ ಸಂದೇಶವನ್ನು ನೀಡಿವೆ ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ನಾಡಹಬ್ಬ ನವರಾತ್ರಿಯಲ್ಲಿ ಶ್ರೀದೇವಿ ಮಹಾತ್ಮೆಯ ಪಾರಾಯಣ

**ಬ್ರಹ್ಮಾನಂದಮ್ ಪರಮ ಸುಖದಂ ಕೇವಲಂ ಜ್ಞಾನಮೂರ್ತಿಂ,**
**ದ್ವಂದ್ವಾತೀತಂ ಗಗನ ಸದೃಶಂ ತತ್ವಮಸ್ಯಾಧಿಲಕ್ಷಂ,**
**ಏಕಮ್ ನಿತ್ಯಂ ವಿಮಲ ವಚನಂ ಸರ್ವಧಿ ಸಾಕ್ಷಿಭೂತಂ**
**ಭಾವಾತೀತಮ್ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ**

ಸಚ್ಚಿದಾನಂದ ಅಂದರೆ ಸತ, ಚಿತ್ ಮತ್ತು ಆನಂದ ಸ್ವರೂಪಗಳನ್ನು ಹೊಂದಿರುವುದಕ್ಕೆ ಬ್ರಹ್ಮಾನಂದ ಎಂದು ಹೇಳುತ್ತಾರೆ. ಅಂತಹ ಪರಮ ಸುಖವನ್ನು ನೀಡುವ ಜ್ಞಾನಮೂರ್ತಿಯಾಗಿರುವ ದ್ವಂದ್ವಗಳಿಂದ ಅತೀತನಾಗಿರುವ ಆಕಾಶದಷ್ಟೇ ವಿಸ್ತಾರವಾದ ಜ್ಞಾನವನ್ನು ಉಳ್ಳವ, ಸದಾಚಾರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿರುವ ನಿತ್ಯವೂ ಸತ್ಯ ಶುದ್ಧ ಮನಸ್ಸುಳ್ಳ ಏಕೈಕ ವ್ಯಕ್ತಿ ಗುರು.ಮಾತು ತಪ್ಪದವನು ಸರ್ವಕ್ಕೂ ಸಾಕ್ಷಿಭೂತನಾಗಿರುವವನು, ಭಾವ ಬಂಧನಗಳಿಗೆ ಒಳಗಾಗದವನು ಸತ್ವ, ರಜ ಮತ್ತು ತಮೋ ಗುಣಗಳನ್ನು ಮೀರಿದ ಎಲ್ಲ ತಾಮಸ ಗುಣಗಳಿಗೆ ಅತೀತನಾಗಿರುವ ಸದ್ಗುರುವಿಗೆ ನಮಸ್ಕಾರಗಳು

ನವರಾತ್ರಿ, ದಸರಾ ಎಂದು ಕರೆಯಲ್ಪಡುವ ಈ ಹಬ್ಬ ವನ್ನೂ ಆಚರಿಸುವ ಹಿನ್ನೆಲೆ, ಮತ್ತು ಉದ್ದೇಶದ ಕುರಿತು ಹೇಳುವುದಾದರೆ ನವರಾತ್ರಿ ಹಬ್ಬವನ್ನು' ದುಷ್ಟ ಶಿಕ್ಷಣ ಶಿಷ್ಟ ರಕ್ಷಣ' ಎಂಬ ಮಹತ್ತರ ಆಶಯದೊಂದಿಗೆ ಆಚರಿಸುತ್ತಾರೆ.

ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ, ಭಾವನಾತ್ಮಕವಾಗಿ ಮತ್ತು ಸಾಮಾಜಿಕವಾಗಿ ನಮ್ಮ ಜನಮಾನಸದಲ್ಲಿ ಬೆರೆತು ಹೋಗಿರುವುದು ನಮ್ಮ ನಾಡ ಹಬ್ಬ ದಸರ. ದಸರಾ ಭಕ್ತಿ ಭಾವದ ವ್ಯಕ್ತ ರೂಪ. ದಸರಾ ಶಕ್ತಿ ಶೌರ್ಯಗಳ ವಿಶ್ವ ರೂಪ. ನಾಡು ನುಡಿಗಳನ್ನು ಮೀರಿ ನಮ್ಮೆಲ್ಲರನ್ನು ಒಗ್ಗೂಡಿಸುವ ಶಕ್ತಿ ರೂಪ.

ಹಿಂದೆ ಅಜ್ಞಾತವಾಸದಲ್ಲಿದ್ದ ಪಾಂಡವರು ಬನ್ನಿ ಗಿಡದ ಕೆಳಗೆ ಹುಗಿದಿಟ್ಟಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ಹೊರತೆಗೆದು ಪೂಜೆ ಮಾಡಿ ದುಷ್ಟರ ವಿರುದ್ಧ ಹೋರಾಡಿ ವಿಜಯ ಪ್ರಾಪ್ತಿಗೊಳಿಸಿಕೊಂಡ ಸಮಯ ಈ ವಿಜಯ ದಶಮಿ. ದುಷ್ಟನಾದ ರಾಕ್ಷಸೇಂದ್ರ ರಾವಣನನ್ನು ರಾಮನು ಸಂಹರಿಸಿದ ದಿನ ಈ ವಿಜಯದಶಮಿ. ತಾಯಿ ಚಾಮುಂಡೇಶ್ವರಿ ದುಷ್ಟ ಮಹಿಷಾಸುರನೊಡನೆ 9 ದಿನಗಳ ಕಾಲ ಕಾದಾಡಿ ಹತ್ತನೆಯ ದಿನ ಆತನನ್ನು ವಧಿಸಿದ ದಿನ ಇವೆಲ್ಲ ಪೌರಾಣಿಕ ಹಿನ್ನೆಲೆಗಳಾದರೆ ವಿಜಯನಗರದ ಅರಸರು ನಾಡಹಬ್ಬವಾಗಿ ದಸರಾ ಇಲ್ಲವೇ ನವರಾತ್ರಿ ಎಂದು ಕರೆಯಲ್ಪಡುವ ಈ ಹಬ್ಬವನ್ನು ಆಚರಿಸುತ್ತಿದ್ದರು. ಮುಂದೆ ವಿಜಯನಗರ ಸಾಮ್ರಾಜ್ಯದ ಕೊನೆಯ ಅರಸು ರಾಮರಾಯನು ಯುದ್ಧದಲ್ಲಿ ಸೋತು 1565 ರಲ್ಲಿ ಮೈಸೂರಿಗೆ ವಲಸೆ ಹೋದನು. ಅಂದಿನಿಂದ ಒಡೆಯರ್ ವಂಶದ ಮೈಸೂರು ಮಹಾರಾಜರು ಈ ನವರಾತ್ರಿ ಹಬ್ಬವನ್ನು ನಾಡಹಬ್ಬವಾಗಿ ಆಚರಿಸಿದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಂತೂ ಈ ನಾಡ ಹಬ್ಬ ಮತ್ತಷ್ಟು ಮೆರುಗನ್ನು ಪಡೆಯಿತು. ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿ ಗಣಪತಿ ಹಬ್ಬವನ್ನು ಆಚರಿಸುತ್ತಾ ಸ್ವಾತಂತ್ರ್ಯ ಪಡೆಯುವ ಕಿಚ್ಚಿಗೆ ಪ್ರೋತ್ಸಾಹ ನೀಡುವ ಪ್ರಕ್ರಿಯೆಯನ್ನು ಕಂಡ ಕರ್ನಾಟಕದ ಸಣ್ಣಪುಟ್ಟ ರಾಜರು, ಆಳರಸರು ನವರಾತ್ರಿ ಹಬ್ಬವನ್ನು ಇನ್ನಷ್ಟು ವಿಜೃಂಭಣೆಯಿಂದ ಆಚರಿಸತೊಡಗಿದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸ್ವಾತಂತ್ರ್ಯ ನಂತರ ದೈವಾರಾಧನೆ ಮಾಡುತ್ತಾ, ಖಾಸಗಿಯಾಗಿ ದರ್ಬಾರನ್ನು ನಡೆಸುತ್ತಾಸಾರ್ವಜನಿಕವಾಗಿ ಜಂಬೂ ಸವಾರಿಯನ್ನು ಮಾಡುತ್ತಾ ತನ್ಮೂಲಕ ಮೈಸೂರು ದಸರೆಯನ್ನು ಒಡೆಯರ್ ರಾಜಮನೆತನದವರು ಮತ್ತು ಮೈಸೂರು ಭಾಗದ ಜನರು ಅದ್ದೂರಿಯಾಗಿ ಆಚರಿಸುತ್ತಾರೆ. ಅಂದು ಮಹಾರಾಜರು ಜಂಬೂ ಸವಾರಿಯಲ್ಲಿ ಆನೆಯ ಮೇಲೆ ಏರುತ್ತಿದ್ದರೆ ಇಂದು ತಾಯಿ ಚಾಮುಂಡಿ ದೇವಿಯನ್ನು ಪಟ್ಟದ ಆನೆಯ ಮೇಲೆ ಪ್ರತಿಷ್ಠಾಪಿಸಿ ಅರಮನೆಯ ಬನ್ನಿಮಂಟಪದವರೆಗೆ ಭವ್ಯ ಮೆರವಣಿಗೆಯಲ್ಲಿ ಕೊಂಡೊಯ್ದು ಶಮೀವೃಕ್ಷವನ್ನು ಪೂಜಿಸಿ ಬನ್ನಿಯನ್ನು ಮುಡಿಯುತ್ತಾ ವಿಜಯದಶಮಿಯನ್ನು ಆಚರಿಸುತ್ತಾರೆ. ಈ ವಿಜಯದಶಮಿಯಂದು 'ದುಷ್ಟ ಶಿಕ್ಷಣ ಶಿಷ್ಟ ರಕ್ಷಣ' ಎಂಬ ಧ್ಯೇಯ ಎಲ್ಲೆಡೆ ಮೊಳಗುವಂತೆ ಮಾಡುತ್ತಾರೆ.

ಮಹಾನವಮಿ ಅಮಾವಾಸ್ಯೆಯ ನಂತರ ಬರುವ ಅಶ್ವಿಜ ಮಾಸದ ಮೊದಲನೆಯ ದಿನವೇ ಘಟಸ್ಥಾಪನೆ. ಪದ್ಧತಿ ಇರುವ ಎಲ್ಲಾ ಧರ್ಮಗಳ ಮನೆ ಮನೆಗಳಲ್ಲಿಯೂ ಕಳಶವನ್ನು ತುಂಬಿ ಅದರ ಮೇಲೆ ವೀಳ್ಯದ ಎಲೆ, ಸಿಪ್ಪೆಯನ್ನು ಹೊಂದಿರುವ ತೆಂಗಿನಕಾಯಿಯನ್ನು ಇರಿಸಿ ದೇವಿಯನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಇನ್ನೂ ಕೆಲವರು ಮಣ್ಣಿನಲ್ಲಿ ಸುಮಾರು 9 ವಿಧದ ಧಾನ್ಯಗಳನ್ನು ಹಾಕಿ ಅದಕ್ಕೆ ನೀರು ಚುಮುಕು ಹೊಡೆದು ಅದರ ಮೇಲೆ ಒಂದು ಮಣ್ಣಿನ ಕೊಡವನ್ನು ಕಳಸದಂತೆ ಪ್ರತಿಷ್ಠಾಪಿಸುತ್ತಾರೆ. ದಿನಗಳೆದಂತೆ ಈ ನವಧಾನ್ಯಗಳು ಮೊಳಕೆ ಒಡೆದು ಕಳಸದ ಸುತ್ತ ಬೆಳೆದು ಕಣ್ಣಿಗೆ ತುಂಬು ಆನಂದವನ್ನು ಉಂಟು ಮಾಡುತ್ತವೆ. ದೇವರ ಮುಂದೆ ದೊಡ್ಡ ನಂದಾದೀಪವನ್ನು ಹಚ್ಚಿಟ್ಟು ಅದನ್ನು ನವರಾತ್ರಿಯ/ದಸರೆಯ ವರೆಗೂ ನಂದದಂತೆ ಕಾಯುತ್ತಾರೆ. ಹೀಗೆ ಘಟಸ್ಥಾಪನೆ ಮಾಡಿದ ನಂತರ ಶ್ರೀದೇವಿಯನ್ನು ಆಹ್ವಾನಿಸಿ ಪೂಜಿಸಿ ಷೋಡಶೋಪಚಾರ ಮಾಡಿ ನೈವೇದ್ಯ ಮಾಡುತ್ತಾರೆ. ಕೆಲವರ ಮನೆಗಳಲ್ಲಿ ಕಡ್ಡಾಯವಾಗಿ ದೇವಿ ಪುರಾಣವನ್ನು, ಇನ್ನೂ ಕೆಲವರು ಲಲಿತಾ ಸಹಸ್ರನಾಮಾವಳಿಯನ್ನು ಮತ್ತು ಕೆಲವರು ಶ್ರೀನಿವಾಸ ಕಲ್ಯಾಣವನ್ನು ಪಾರಾಯಣ ಮಾಡುತ್ತಾರೆ. ದೇವಾಲಯಗಳಲ್ಲಿಯೂ ಕೂಡ ದೇವಿಯನ್ನು ಪ್ರತಿಷ್ಠಾಪಿಸಿ 9 ದಿನಗಳವರೆಗೆ ಸತತವಾಗಿ ವಿವಿಧ ದೇವತೆಗಳ ರೂಪದಲ್ಲಿ ಪೂಜಿಸಿ ಗಂಡಾರತಿ ಇಲ್ಲವೇ ಕಾಕಡಾರತಿ ಮೂಲಕ ಭಜಿಸಿ ದೇವಿ ಪುರಾಣವನ್ನು, ಸಪ್ತಶತಿ ಪಾಠ, ಲಲಿತೋಪಾಖ್ಯಾನ, ದುರ್ಗಾ ಸಪ್ತಶತಿ ಪಾರಾಯಣ ಮಾಡುತ್ತಾರೆ. ನವರಾತ್ರಿಯ ಮೊದಲ ದಿನ ಯೋಗ ನಿದ್ರ ದೇವಿ, ಎರಡನೇ ದಿನ ದೇವಜಾತದುರ್ಗ, ಮೂರನೇ ದಿನ ಮಹಿಶಾಸುರ ಮರ್ದಿನಿ, ನಾಲ್ಕನೇ ದಿನ ಸಿಂಹ ವಾಹಿನಿಯಾದ ಚಾಮುಂಡೇಶ್ವರಿ ಶೈಲಜಾ ಪುತ್ರಿ,, ಐದನೇ ದಿನ ದೂಮ್ರದೇವಿ, ಆರನೇ ದಿನ ಚಂಡಮುಂಡಾಸುರರನ್ನು ವಧೆ ಮಾಡಿದ ದುರ್ಗಾದೇವಿ, ಏಳನೇ ದಿನ ರಕ್ತ ಬೀಜಾಸುರನನ್ನು ಕೊಂದ ದುರ್ಗಾದೇವಿಯನ್ನು ಶಾರದೆಯ ರೂಪದಲ್ಲಿ, ಎಂಟನೇ



ದಿನ ನಿಶುಂಭನನ್ನು ಸಂಹರಿಸಿದ ದುರ್ಗಾದೇವಿಯನ್ನು ಲಕ್ಷ್ಮಿ ರೂಪದಲ್ಲಿ ಪೂಜಿಸುತ್ತಾರೆ. ಈ ದಿನವನ್ನು ದುರ್ಗಾಷ್ಟಮಿ ಎಂದು ಕೂಡ ಕರೆಯುತ್ತಾರೆ. ಉತ್ತರ ಭಾರತದಲ್ಲಿ ಸಪ್ತಮಿ ಅಷ್ಟಮಿ ನವಮಿ ಮೂರು ದಿನಗಳನ್ನು ಸೇರಿಸಿ ತ್ರಿದಿನ ದುರ್ಗಾಪೂಜೆ ಎಂದು ಪೂಜಿಸುತ್ತಾರೆ. ಸಪ್ತಮಿಯ ದಿನ (ಮೂಲ ನಕ್ಷತ್ರ)ದಂದು ಶಾರದೆಯನ್ನು ಪೂಜಿಸಲು ಬಗೆ ಬಗೆಯ ಪುಸ್ತಕಗಳನ್ನು ಇಟ್ಟು ಪವಿತ್ರ ಗ್ರಂಥಗಳನ್ನು, ಚಿನ್ನ, ಬೆಳ್ಳಿ ಗಳನ್ನು ಇಟ್ಟು ಪೂಜಿಸಲಾಗುತ್ತದೆ. ಎಂಟನೆಯ ದಿನದಂದು ಲಕ್ಷ್ಮಿ ಪೂಜೆ ಮಾಡುತ್ತಾರೆ. ಒಂಬತ್ತನೆಯ ದಿನ ನವಮಿಯಂದು ಪಾಂಡವರು ಬನ್ನಿ ವೃಕ್ಷದ ಕೆಳಗೆ ಮುಚ್ಚಿಟ್ಟ ತಮ್ಮ ಸರ್ವ ಶಸ್ತ್ರಾಸ್ತ್ರಗಳನ್ನು ತೆಗೆದು ಪೂಜಿಸಿದ ದಿನ... ಅದುವೇ ಆಯುಧ ಪೂಜೆ. ಇಂದಿನ ದಿನ ಎಲ್ಲರೂ ತಮ್ಮ ತಮ್ಮ ಮನೆಯಲ್ಲಿರುವ ಕತ್ತಿ, ಖಡ್ಗ, ಕಟಾರಿ, ಅಳತೆಯ ಮತ್ತು ತೂಕದ ವಸ್ತುಗಳು, ಕೃಷಿ ಕೆಲಸದ ಸಾಮಗ್ರಿಗಳನ್ನು ಇಟ್ಟು ಪೂಜಿಸುತ್ತಾರೆ. ನವರಾತ್ರಿಯ ಅಥವಾ ದಸರೆಯ ಕೊನೆಯ ದಿನ ವಿಜಯದಶಮಿ. ಅಂದು ತಾಯಿ ಚಾಮುಂಡಿಯು ದುಷ್ಟ ಮಹಿಶಾಸುರನನ್ನು ಕೊಂದ ದಿನ, ರಾಮ ರಾವಣನನ್ನು ವಧಿಸಿದ ದಿನ ... ಈ ದಿನದ ನೆನಪಿಗಾಗಿ ವಿಜಯದಶಮಿಯನ್ನು ಆಚರಿಸುವರು.

ವಿಜಯದಶಮಿಯ ಈ ಹಬ್ಬ ಸ್ತ್ರೀಶಕ್ತಿಯ ಪಾರಮ್ಯವನ್ನು ಸೂಚಿಸುವ ಹಬ್ಬ. ಎಲ್ಲೆಡೆಯು ತಾಯಿದುರ್ಗೆಯನ್ನು ಹಲವು ವಿಧಧ ನಾಮಗಳಿಂದ ಕರೆಯುತ್ತಾ ವಿವಿಧ ಬಗೆಗಳಲ್ಲಿ ಪೂಜಿಸುತ್ತಾರೆ.ನವರಾತ್ರಿಯ ನಿಮಿತ್ತ ಕೆಲವರಂತೂ ಇಡೀ ದಿನಕ್ಕೆ ಕೇವಲ ಒಪ್ಪತ್ತಿನ ಊಟವನ್ನು ಮಾಡುತ್ತಾ ಸಂಪೂರ್ಣ ಮೌನಕ್ಕೆ ಶರಣಾಗುತ್ತಾರೆ. ಲೌಕಿಕವಾಗಿ ಮೇಲಿನ ಎಲ್ಲ ಪೂಜೆಯ ಆಚರಣೆಗಳು ಸರಿಯಾದುದಷ್ಟೇ..... ಆದರೆ ಈ ನವರಾತ್ರಿಯ ಆಚರಣೆಯ ಮೂಲ ಉದ್ದೇಶವೇ ಬೇರೆ. ಈ ಇಡೀ ಬ್ರಹ್ಮಾಂಡವನ್ನು ಸೃಷ್ಟಿಸಿದ್ದು ಶ್ರೀದೇವಿ. ಆಕೆಯೇ ಹರಿಹರ ಬ್ರಹ್ಮಾದಿಗಳನ್ನು ಕೂಡ ಸೃಷ್ಟಿಸಿದಳು.

ಶ್ರೀದೇವಿ ಪುರಾಣದಲ್ಲಿ ಮೊದಲ ಅಧ್ಯಾಯದಲ್ಲಿ ಬರುವ ಶಿವಪುರ ಎಂದರೆ 25 ತತ್ವಗಳಿಂದ ನಿರ್ಮಿತವಾದ ಸ್ಥೂಲ ದೇಹ. ಅದರಲ್ಲಿ ರಜತಾದ್ರಿ ಬೆಳ್ಳಗೆ ಹೊಳೆಯುವಂತಹ ಸತ್ತ್ವ ಗುಣವನ್ನು ಸೂಚಿಸುವಂತದ್ದು... ಅಸ್ತಿಗಳೆ ಶಶಿಕಾಂತ ಇಲ್ಲವೇ ಚಂದ್ರಕಾಂತ ಶಿಲೆ ಮತ್ತು ಬಂಡೆಗಳು. ಚರ್ಮವೇ ಮುಸುಕಿದ ತಪ್ಪಲು ದೇಹದ ಎರಡು ಸಂಧಿಗಳೆ ಕೊಳಗಳು, ಬೆವರು ಮೂತ್ರಗಳೆ ನೀರೂಟೆ, ರೋಮವೇ ತೃಣ, ಸೂಕ್ಷ್ಮವೇ ಕೆಸರು, ಅಷ್ಟಮದವೇ ಕಾಡುಕೋಣ, ಸಪ್ತ ವ್ಯಸನಗಳೇ ಕಾಡಾಕಳು, ಆನಂದಮಯಕೋಶವೇ ಜ್ಞಾನಿಗಳ ಆಶ್ರಮ. ಸುಮನ ಸುಬುದ್ಧಿ ಸುಚಿತ್ರ ನಿರಹಂಕಾರಗಳೇ ಬ್ರಹ್ಮ ಧ್ಯಾನ ಮಾಡುವ ಋಷಿಗಳು, ವಿಷಯಾಸಕ್ತಿಯುಳ್ಳ ಮನಗಳೆ ಬೆಕ್ಕು, ಇಂದ್ರಿಯವೇ ಶುಭ್ರವರ್ಣದ ಇಲಿ, ಚಂಚಲ ಗುಣವೇ ಸಾರಂಗ, ವೈರಾಗ್ಯ ಮನವೇ ಮುಂಗುಲಿ, ವಿಕಾರಮಯ ಮನವೇ ಸರ್ಪ, ಸಂಕಲ್ಪ ಮನವೇ ಉಡ, ಜೀವವೇ ಶುಕ್ರ, ಮನವೇ ಮರ್ಕಟ ಏಳು ಪದರಿನ ಚರ್ಮವೇ ಏಳು ಸುತ್ತಿನ ಕೋಟೆ ಭುಜಗಳೇ ಕೊತ್ತಳ 100 ಸಣ್ಣ ನಾಡಿಗಳೆ ನೂರು ಬಾಜಾರಗಳು ರಕ್ತಾಶಯವೇ ಬಾವಿ, ಸಪ್ತಧಾತುಗಳೆ ನವರತ್ನ ಶುದ್ದ ಮತ್ತು ಸತ್ವ ಪ್ರಧಾನವಾದ ವಿದ್ಯ.... ಅಂದರೆ ನಮ್ಮ ಇಡೀ ದೇಹದಲ್ಲಿ ಆವರಿಸಿಕೊಂಡಿರುವ ಗುಣಗಳನ್ನು ಅಂಗ ಮತ್ತು ಪ್ರತ್ಯಂಗಗಳ ರೂಪದಲ್ಲಿ ವರ್ಣಿಸಲಾಗಿದೆ.

ಶ್ರೀದೇವಿಯು ಪರಬ್ರಹ್ಮ ಸ್ವರೂಪಿಣಿ .... ಪಂಚ ಭೂತಗಳಿಂದ ಉಂಟಾದವಳು ದೇವಿ. ಉರಿ ಮತ್ತು ಹೊಗೆಗಳು ಅಗ್ನಿಯಲ್ಲಿ ವ್ಯಾಪಿಸುತ್ತವೆಯಷ್ಟೇ.... ಹಾಗೆಯೇ ಧ್ಯಾನ ಶಕ್ತಿ ಮತ್ತು ಮಾಯೆಗಳು ಬ್ರಹ್ಮ ಸ್ವರೂಪದಲ್ಲಿ ವ್ಯಕ್ತವಾಗುತ್ತವೆ. ದೇವಿಯು ಚಿತ್ತ ಮತ್ತು ಶಕ್ತಿಯನ್ನು ಹೊಂದಿದ ಚೈತನ್ಯ ಸ್ವರೂಪಳು. ಮಾಯೆ ಎಂದರೆ ವಿದ್ಯೆ ಮತ್ತು ಅವಿದ್ಯೆ ಎಂಬ ಎರಡು ಪ್ರಕಾರಗಳು. ಶ್ರೀದೇವಿಯು ಸೃಷ್ಟಿಸಿದ ವಿಷ್ಣು ಬ್ರಹ್ಮ ರುದ್ರರಲ್ಲಿ ಬ್ರಹ್ಮನು ರಜೋಗುಣ ಉಳ್ಳವನಾಗಿ ಸೃಷ್ಟಿಯ ಉತ್ಪತ್ತಿಗೆ ಕಾರಣನಾಗಿದ್ದರೆ ತಮೋ ಗುಣವುಳ್ಳ ವಿಷ್ಣು ಸೃಷ್ಟಿಯ ಸಂರಕ್ಷಣ ಕರ್ತನು, ಅಂತರಂಗದಲ್ಲಿ ಸತ್ವ ಗುಣ ಬಹಿರಂಗದಲ್ಲಿ ತಮೋ ಗುಣವುಳ್ಳ ರುದ್ರನು ಸೃಷ್ಟಿಯ ಲಯ ಕರ್ತನು.

ಈ ಮೂವರಲ್ಲೂ ಸತ್ಯ ಶಮೆ-ದಮೆ ಶಾಂತಿ ಯೋಗ ಮತ್ತು ಅಣಿಮಾದಿ ವಿದ್ಯೆಗಳು ಇದ್ದವು. ಶ್ರೀದೇವಿಯು ಹರಿಹರ ಬ್ರಹ್ಮಾದಿ ದೇವಾನುದೇವತೆಗಳಿಗೆ ಒಡೆಯಳು. ದೇವಿಯ ಆಜ್ಞೆಯಂತೆ ಆಕೆಯು ಸೃಷ್ಟಿಸಿದ ಹರಿ,ಹರ ಬ್ರಹ್ಮಾದಿಗಳು 14 ಲೋಕಗಳನ್ನು ಪಾಲಿಸಿದರು. ಈ 14 ಲೋಕಗಳು ಪಂಚ ಕರ್ಮೇಂದ್ರಿಯಗಳು ಪಂಚ ಜ್ಞಾನೇಂದ್ರಿಯಗಳು ಮತ್ತು ನಾಲ್ಕು ಅಂತಃಕರಣಗಳು.

ದೇವಿ ಮಹಾತ್ಮೆಯಲ್ಲಿ ಬರುವ ಎಲ್ಲ ರಾಕ್ಷಸರು ನಮ್ಮಲ್ಲಿ ಮನೆ ಮಾಡಿರುವ ಅರಿಷಡ್ವರ್ಗಗಳು. ಕಾಮ, ಕ್ರೋಧ, ಲೋಭ, ಮೋಹ,ಮದ ಮತ್ತು ಮತ್ಸರಗಳು ಇವೇ ಆ ಅರಿ ಷಡ್ವರ್ಗಗಳು. ಆರಿ ಎಂದರೆ ವೈರಿ... ನಮ್ಮ ದೇಹ ಮತ್ತು ಮನಸ್ಸನ್ನು ಹಾಳು ಮಾಡುವ, ಗೊಂದಲಕ್ಕೆ ದೂಡುವ ಆರು ವಿಧದ ವೈರಿಗಳು ನಮ್ಮ ಜೀವನವನ್ನು ಅಧಃಪಾತಾಳಕ್ಕೆಳಸಬಲ್ಲವು. ಈ ಅರಿಷಡ್ವರ್ಗಗಳನ್ನು ನಮ್ಮ ಅಧೀನದಲ್ಲಿ ಇಟ್ಟುಕೊಳ್ಳುವುದು ಎಂದರೆ ತನ್ನ ಸಂಗಾತಿಯಲ್ಲಿ ಮಾತ್ರ ಸಮಯೋಚಿತವಾದ ದಾಂಪತ್ಯ ತೃಪ್ತಿಯನ್ನು ಹೊಂದಬೇಕು, ಪಾಪಿಷ್ಟರಾದ ದುಷ್ಟ ಮಾನವರ ವಿಷಯದಲ್ಲಿ ಮಾತ್ರ ಕೋಪ ತಳೆಯಬೇಕು, ಸದ್ಧರ್ಮ ನಿರತ ಪುಣ್ಯ ಸಂಪಾದನೆಯಲ್ಲಿ ಲೋಭವನ್ನ ಅನುಸರಿಸಬೇಕು, ಸತ್ಪುರುಷರಲ್ಲಿ ಮೋಹ ಉಳ್ಳವರಾಗಬೇಕು, ಅನ್ಯಾಯದ ವಿಷಯದಲ್ಲಿ ನ್ಯಾಯ ನಿಷ್ಠುರತೆಯುಳ್ಳವರಾಗಬೇಕು, ದುಷ್ಟ ಕಾರ್ಯ ಮಾಡುವವರಲ್ಲಿ ಮತ್ಸರವುಳ್ಳವನಾಗಬೇಕು ಹೀಗೆ ಶಿಷ್ಟಾಚಾರಗಳನ್ನು ಹೊಂದಿದರೆ ಅರಿಷಡ್ವರ್ಗಗಳನ್ನು ಗೆಲ್ಲಬಹುದು. ಒಂದಾನೊಂದು ಕಾಲದಲ್ಲಿ ಇಂದ್ರಾದಿ ದೇವತೆಗಳು ಕೂಡ ಪರಬ್ರಹ್ಮ ವಸ್ತುವಿನ ಮಹಿಮೆಯನ್ನು ಅರಿಯದೆ ಅರಿಷಡ್ವರ್ಗಗಳ ದಾಸಾನುದಾಸರಾಗಿ ತಮ್ಮ ಶಕ್ತಿಯನ್ನು ಕಳೆದುಕೊಂಡರು. ಮುಂದೆ ಅರಿವು ತಿಳಿದೆದ್ದು ದೇವಿಗೆ ಶರಣಾಗತರಾಗಲು ದೇವಿಯು ಅವರನ್ನು ರಕ್ಷಿಸಿದಳು.

ಶ್ರೀದೇವಿ ಮಹಾತ್ಮೆಯಲ್ಲಿ ಬರುವ ಶು0ಭ ಮತ್ತು ನಿಶುಂಭರು ಕೂಡ ಅಹಂ ಮತ್ತು ಇದಂ ಎಂಬ ಅಹಂಕಾರಗಳಿಗೆ ಗುರಿಯಾದವರು. ಧೂಮ್ರಲೋಚನನು ಕೋಪಾವೇಶ ವಿಕಾರವುಳ್ಳ ರಾಕ್ಷಸ. ಚಂಡ ಮುಂಡರು ದುರಾಗ್ರಹಗಳನ್ನು ಬಿಡದಿರುವ ಮತ್ತು ಸಾಯಲೇ ಬಾರದೆಂಬ ದುರಾಸೆಯನ್ನು ಹೊಂದಿರುವ ರಾಕ್ಷಸರು. ಶ್ರೀದೇವಿ ಮಹಾತ್ಮೆಯಲ್ಲಿ ಬರುವ ರಕ್ತಬೀಜನು ಮನುಷ್ಯನ ಅತಿಯಾದ ಆಸೆಗೆ ದೃಷ್ಟಾಂತವಾಗಿ ಬರುತ್ತಾನೆ ಆಸೆಗೆ ಆದಿ ಇಲ್ಲ ಅಂತ್ಯವೂ ಇಲ್ಲ... ಕಂಡ ಕಂಡದ್ದನ್ನೆಲ್ಲ ಬಯಸುವ ಆಸೆಯನ್ನು ರಾಗ ಅಥವಾ ಮೋಹ ಎನ್ನಬಹುದು ಇದನ್ನು ಕೂಡ ನಾವು ಅಂಕೆಯಲ್ಲಿ ಇಟ್ಟುಕೊಳ್ಳಲೇಬೇಕು ಎಂಬ ಉದ್ದೇಶದಿಂದಲೇ ದೇವಿಯು ರಕ್ತ ಬೀಜಾಸುರನನ್ನು ಕೊಂದಳು. ಆಸೆ ಎನ್ನುವುದು ಅತೃಪ್ತಿಯನ್ನು ಉಂಟುಮಾಡುತ್ತದೆ ಆಸೆ ನಮಗೆ ಅಜ್ಞಾನವನ್ನು ದೌರ್ಬಲ್ಯವನ್ನು ನೀಡುತ್ತದೆ. ನಮ್ಮ ಜೀವಿತಾವಧಿಯಲ್ಲಿ ನಮಗೆ ಎಷ್ಟು ಲಭ್ಯವೋ ಅಷ್ಟನ್ನು ಮಾತ್ರ ನಾವು ಪಡೆಯಲು ಸಾಧ್ಯ. ನಮ್ಮ ಲಭ್ಯತೆಯ ಕೊಡ ಸಮುದ್ರ ಹೊಕ್ಕರು ಬಾವಿಯಲ್ಲೇ ತುಂಬಿದರು ಕೊಡಕ್ಕೆ ಎಷ್ಟು ಹಿಡಿಯುತ್ತದೆಯೋ ಅಷ್ಟನ್ನು ಮಾತ್ರ ತುಂಬಲು ಸಾಧ್ಯ ಅಂದರೆ ನಮ್ಮ ಯೋಗದಲ್ಲಿ ಬರೆದಿರುವ ಪ್ರಮಾಣದಷ್ಟು ಮಾತ್ರ ನಮಗೆ ಲಭ್ಯವಾಗುತ್ತದೆ. ನಾನು ನನ್ನದು ಎಂಬ ಅಹಂಕಾರವೇ ನಿಶುಂಬ ಎಂಬ ರಾಕ್ಷಸ ರೂಪದಲ್ಲಿದ್ದರೆ ದುರಹಂಕಾರವು ಶುಂಭನ ರೂಪದಲ್ಲಿ ಬರುತ್ತದೆ. ಅಹಂ ನಾಶವಾಗಿ ನಿಜ ಸ್ವರೂಪದ ವಿಚಾರ ಹೊಳೆಯಬೇಕಾದರೆ ಪ್ರಧಾನ ಶತ್ರುವಾದ ದುರಹಂಕಾರ ಅಳಿದು ಹೋಗಬೇಕು. ನಾನು, ನನ್ನದು, ನನ್ನಿಂದ, ನನಗಾಗಿ ಎಂಬ ಭಾವಗಳು ನಮ್ಮನ್ನು ಸುಳ್ಳಿನ ಸಾಮ್ರಾಜ್ಯದಲ್ಲಿ ಇರಿಸುತ್ತವೆ. ನಮ್ಮ ಈ ದೇಹವು ನಮ್ಮದಲ್ಲ... ನಮ್ಮ ಕಾರಣ ಶರೀರವು ನಾವು ವಾಸಿಸುವ ಮನೆ. ನಾವು ಧರಿಸಿದ ಅಂಗಿ ಇದ್ದಂತೆ, ಒಂದಲ್ಲ ಒಂದು ದಿನ ನಾವು ಇದನ್ನು ಬಿಟ್ಟು ಹೋಗಲೇಬೇಕು. ಆದ್ದರಿಂದ ಆತ್ಮಜ್ಞಾನವು ಅತಿ ಮುಖ್ಯ ಎಂಬುದನ್ನು ಶ್ರೀದೇವಿ ಮಹಾತ್ಮೆಯಲ್ಲಿ ಶೃಂಗ ನಿಶುಂಭರ ಸಂಹಾರದ ಮೂಲಕ ಅರಿಯಬಹುದು. ಇಲ್ಲಿ ಶ್ರೀದೇವಿಯು ಒಬ್ಬೊಬ್ಬ ರಾಕ್ಷಸನನ್ನು ನಿರ್ನಾಮ ಮಾಡುವುದು ನಮ್ಮಲ್ಲಿರುವ ಅಷ್ಟಮದಗಳನ್ನು, ಅರಿಷಡ್ವರ್ಗಗಳನ್ನು ನಾವು ತಮ್ಮ ವ್ಯಕ್ತಿತ್ವದ ನಿರ್ಮಾಣ ಮಾಡಿಕೊಳ್ಳುವ ಮೂಲಕ, ಸಚಿಂತನೆ ಸದಾಚಾರಗಳನ್ನು ಪಾಲಿಸುವುದರ ಮೂಲಕ ನಿರ್ನಾಮಗೊಳಿಸ ಬೇಕೆಂಬ ಅಂತಿಮ ಸತ್ಯದ ಸಂಕೇತವೇ ಆಗಿದೆ.

ಪಾರ್ವತಿಯು ದೇವಿಯ ಅವತಾರವೇ. ಆಕೆಯು ಶಿವನನ್ನು ವರಿಸಿದರೂ ಶಿವನಿಗಿಂತ ಆಕೆಯೇ ಒಂದು ಕೈ ಮೇಲು ಎಂದು ಹೇಳಬಹುದು. ಆದ್ದರಿಂದಲೇ ಶಿವನು ಆಕೆಗೆ ತನ್ನ ದೇಹದ ಅರ್ಧ ಭಾಗವನ್ನು ನೀಡಿ ಅರ್ಧನಾರೀಶ್ವರನೆನಿಸಿಕೊಂಡನು. ಭಗವಾನ್ ಮಹಾವಿಷ್ಣುವಿನ ದಶಾವತಾರಗಳು ದೇವಿಯ ಸ್ವರೂಪಗಳೇ ಆಗಿವೆ. ಪಾರ್ವತಿಯ ಅವತಾರಗಳೇ ಶ್ರೀ ಚಕ್ರದ ಬಿಂದು, ಬೀಜ, ದಳಗಳು. ಮಣಿಪುರ ವಿಶುದ್ಧಿ ಚಕ್ರಗಳು ಪಾರ್ವತಿಯ ವಾಸಸ್ಥಾನಗಳು. ಪಾರ್ವತಿಯೇ ಜೀವ ಸುಧೆ. ಆಕೆಯೇ ನಾದರೂಪಳು ಸರ್ವಜೀವರಾಶಿಗಳು, ಕ್ರಿಮಿ,ಕೀಟ, ದೇವ,ಅಸುರಾಸುರ, ಪರಬ್ರಹ್ಮ ಎಲ್ಲವೂ ಆಕೆಯೇ. ಪಾರ್ವತಿಯ ದೆಶೆಯಿಂದಲೇ ಶಿವನು ಪರಶಿವ ಎಂದು ಕರೆಯಲ್ಪಡುತ್ತಾನೆ.... ಆದ್ದರಿಂದಲೇ ಎಲ್ಲಾ ಮಂಗಳ ಕಾರ್ಯಕ್ರಮಗಳಲ್ಲಿ ಪಾರ್ವತಿ ಪತಿ ಹರ ಹರ ಮಹಾದೇವ ಎಂದು ಪಾರ್ವತಿ ದೇವಿಯನ್ನು ಮೊದಲುಗೊಂಡು ಪೂಜಿಸುತ್ತಾರೆ. ಗಂಗೆಯನ್ನು ಧರಿಸಿ ಗಂಗಾಧರ, ಉಮೆಯ ಪತಿ ಮಹೇಶ್ವರ, ಗೌರಿಯ ಪತಿ ಗೌರಿಶಂಕರ ಎಂದು ಶಿವನು ಕರೆಯಲ್ಪಡುವುದು ದೇವಿಯ ಮಹಿಮೆಯಿಂದಲೇ. ಈ ಸೃಷ್ಟಿಯಲ್ಲಿ ಗಂಡಿನಷ್ಟೇ ಅಲ್ಲ ಗಂಡಿಗಿಂತ ಹೆಚ್ಚಿನ ಜವಾಬ್ದಾರಿಯನ್ನು , ಅಸೀಮಶಕ್ತಿಯನ್ನು ಅಪಾರ ಕರುಣೆಯನ್ನು ಹೊಂದಿದವಳು ಶ್ರೀದೇವಿ.

ಅಂತೆಯೇ ದೇವಿಯನ್ನು ಸ್ತೋತ್ರ ಜಪ ತಪ ಧ್ಯಾನಗಳನ್ನು ಮಾಡುವ ಮೂಲಕ ಪೂಜಿಸಬಹುದು. ದೇವಿ ಮಹಾತ್ಮೆಯನ್ನು ಓದಲು ಭಯ ಬೇಕಿಲ್ಲ... ಭಕ್ತಿ ಮತ್ತು ವಿಶ್ವಾಸಗಳು ಇದ್ದರೆ ಸಾಕು. ಯಾವುದೇ ರೀತಿಯ ಕಾಮನೆಗಳನ್ನು ಹೊಂದದೆ ನಿಷ್ಕಾಮ ಭಕ್ತಿಯಿಂದ ದೇವರನ್ನು ಪೂಜಿಸಿ ಪ್ರಾರ್ಥಿಸಬೇಕು. ದೇವಿಯು ಸಾಧಕನನ್ನು ಸದಾ ಬೆಂಗಾವಲಾಗಿ ನಿಂತು ಸಲಹುತ್ತಾಳೆ. ದೇವಿಯು ಅಪಾರ ಕರುಣಾಸಾಗರಳು. ಮಾತೃ ಹೃದಯಿ ,ಮಮತಾಮಯಿ. ಆಕೆಯು ಸತ್ ಚಿತ್ ಆನಂದಗಳನ್ನು ಹೊಂದಿರುವ ಸಚ್ಚಿದಾನಂದ ಪರಬ್ರಹ್ಮ ಸ್ವರೂಪಿ , ಎಂದೂ ನಾಶವಾಗದ ಪೂರ್ಣ ಚೈತನ್ಯ ಸ್ವರೂಪಿ. ಆದ್ದರಿಂದ ದೇವಿಯನ್ನು ಸತತವಾಗಿ ಪೂಜಿಸಿ ಆರಾಧಿಸಿ ಆಕೆಯ ಕೃಪೆಗೆ ಪಾತ್ರರಾಗಬೇಕು. ಎಲ್ಲರಿಗೂ ಆ ದೇವಿಯು ಆಯುರಾರೋಗ್ಯ ಸುಖ ಸಮೃದ್ಧಿಯನ್ನು ನೀಡಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತಾ, ಎಲ್ಲರಿಗೂ ಮತ್ತೊಮ್ಮೆ ನವರಾತ್ರಿಯ ಶುಭಾಶಯಗಳು.

## ಕವಿ ಮನಸು

### ಹಿಮಗಿರಿ ತನಯೆ

ವರನೀಡು ಮಾತೆ ಶ್ರೀಗೌರೀ
ನಮಿಸುತ ನಿಂತಿರುವೆ
ವರನೀಡು ಮಾತೆ ಶ್ರೀಗೌರಿ

ತನುಮನದಲ್ಲಿಯು ನಿನ್ನನು ನೆನೆಯುವೆ
ಬದುಕಿನ ದುರಿತವ ಕಳೆಯಲು ಬೇಡುವೆ
ಅರಿಯದೆ ಮಾಡಿದ ಪಾಪವ ಮನ್ನಿಸಿ
ಕರುಣದೆ ಕಾವುದು ಶ್ರೀಜಗದಂಬೆ

ಹಿಮಗಿರಿ ತನಯೇ ಶಂಕರ ವಲ್ಲಭೆ
ಜಗದೋದ್ಧಾರಿಣಿ ಗಣಪತಿ ಜನನಿ
ಭಕ್ತರ ಪೊರೆಯುವ ಕರುಣಾ ವಾರಿಧಿ
ನಂಬಿದೆ ನಿನ್ನನು ಶ್ರೀ ದುರ್ಗಾಂಬೆ

ದನುಜರ ವಧಿಸಿದೆ ಲೋಕವ ರಕ್ಷಿಸೆ
ಸುರನರ ವಂದಿತೆ ಷಣ್ಮುಖ ಮಾತೆಯೆ
ಬದುಕಿನ ಭವಣೆಯ ತಾಳದೆ ನೊಂದೆನು
ಕರುಣದಿ ಪೊರೆವುದು ಶ್ರೀ ಭ್ರಮರಾಂಬೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಮೈಕ್ರೋ ನ್ಯೂಸ್

### ವಾಹನಗಳ ಮಾಲೀಕರು ತೆರಿಗೆ ಪಾವತಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಬಳ್ಳಾರಿ, ಸಿರುಗುಪ್ಪ, ಕಂಪ್ಲಿ, ಕುರುಗೋಡು ಮತ್ತು ಸಂಡೂರು ತಾಲ್ಲೂಕುಗಳಲ್ಲಿ ಬರುವ ಸಾರಿಗೆ ಹಾಗೂ ಸಾರಿಗೇತರ ವಾಹನಗಳ ಮಾಲೀಕರು ತಮ್ಮ ವಾಹನಗಳ ತೆರಿಗೆಯನ್ನು ಕೂಡಲೇ ಪಾವತಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ.ಎಸ್.ಶ್ರೀನಿವಾಸ ಗಿರಿ ಅವರು ತಿಳಿಸಿದ್ದಾರೆ.

ತೆರಿಗೆ ಬಾಕಿಯಿರುವ ವಾಹನಗಳ ಮಾಲೀಕರಿಗೆ ಈಗಾಗಲೇ ಅಂಚೆ ಮೂಲಕ ನೋಟಿಸ್ ಕಳುಹಿಸಲಾಗಿದೆ. ನೋಟಿಸ್ ತಲುಪಿದ ತಕ್ಷಣ ವಾಹನದ ಮಾಲೀಕರು ಪ್ರಾದೇಶಿಕ ಸಾರಿಗೆ ಕಚೇರಿಗೆ ಹಾಜರಾಗಿ ತೆರಿಗೆ ಪಾವತಿಸಬೇಕು.

ತಪ್ಪಿದಲ್ಲಿ ಮೋಟಾರು ವಾಹನ ಕಾಯ್ದೆ ಮತ್ತು ಅದರ ಅಡಿ ಬರುವ ನಿಯಮಗಳನುಸಾರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗುವುದು ಮತ್ತು ವಾಹನಗಳ ತನಿಖಾ ಸಮಯದಲ್ಲಿ ವಾಹನವು ಕಂಡು ಬಂದಲ್ಲಿ ಜಪ್ತಿ ಮಾಡಿ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅದೇರೀತಿಯಾಗಿ 15 ವರ್ಷಗಳ ಅವಧಿ ಪೂರೈಸಿರುವ ಅಟೋರಿಕ್ಷಾ, ಶಾಲಾ ವಾಹನ ಮತ್ತು ಇನ್ನಿತರ ಪ್ರಯಾಣಿಕ ವಾಹನಗಳ ನೋಂದಣಿ ರದ್ದು ಪಡಿಸಿಕೊಂಡು, ಸ್ಕ್ರಾಪ್ ಮಾಡಿಕೊಳ್ಳಬೇಕು ಎಂದೂ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ.ಎಸ್.ಶ್ರೀನಿವಾಸ ಗಿರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹವ್ಯಾಸ: ಆತ್ಮಸಂತೋಷದೊಂದಿಗೆ ಜೀವನೋಪಾಯ...

ಹವ್ಯಾಸಗಳು ಜೀವನವನ್ನು ಉತ್ಕೃಷ್ಟಗೊಳಿಸುವ ಉತ್ಸಾಹ ಮತ್ತು ಸಂತೋಷವನ್ನು ತರುತ್ತವೆ. ಒಳ್ಳೆಯ ಸೃಜನಾತ್ಮಕ ಹವ್ಯಾಸಗಳು (HOBBIES) ನಮ್ಮನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತವೆ. **ಉದಾಹರಣೆಗೆ:** ಓದುವ, ಬರೆಯುವ, ಹಾಡುವ, ಚಿತ್ರ ಬಿಡಿಸುವ, ಕೈತೋಟ ಮಾಡುವ, ಅಡುಗೆ ಮಾಡುವ, ವಿಶೇಷ ವಸ್ತುಗಳ ಸಂಗ್ರಹಿಸುವ, ಆಟವಾಡುವ, ಸಂಶೋಧನೆ ಮಾಡುವ, ಭಾಷಣ ಮಾಡುವ, ಫೋಟೋ ತೆಗೆಯುವ, ಸಹಾಯ ಮಾಡುವ ಇತ್ಯಾದಿಗಳನ್ನು ಅನಯಾಸವಾಗಿ ಹಾಗೂ ಆರೋಗ್ಯಕರವಾಗಿ ರೂಢಿಸಿಕೊಂಡಾಗ ಸೋಮಾರಿತನ ದೂರ ಮಾಡಬಹುದು. ಒಂದಲ್ಲ ಒಂದು ಹವ್ಯಾಸ ಜೀವನದುದ್ದಕ್ಕೂ ಇದ್ದಾಗ ಆಯುಷ್ಯ ಕಳೆದದ್ದೇ ಗೊತ್ತಾಗೊಲ್ಲ. ಇಲ್ಲದಿದ್ದರೆ ಒಣ ಆಲೋಚನೆಗಳಿಂದ ಮೈ ಮನಸ್ಸುಗಳು ಬೇಗನೇ ಮುಪ್ಪಿಗೆ ಮುಂದುವರೆಯುತ್ತವೆ.

ಹವ್ಯಾಸಗಳಿಗೆ ವಯಸ್ಸಿನ ಮಿತಿಯಿಲ್ಲ. ಹವ್ಯಾಸಗಳು ದಿನನಿತ್ಯದ ಒತ್ತಡದ ಬದುಕನ್ನು ಸುಮಧುರಗೊಳಿಸುತ್ತವೆ. ಆರಂಭದಲ್ಲಿ ವಿನೋದಕ್ಕಾಗಿಯೋ ಅಥವಾ ಸಮಯ ಕಳೆಯುವುದಕ್ಕಾಗಿಯೋ ಬೆಳೆಸಿಕೊಂಡ ಹವ್ಯಾಸಗಳು ನಂತರ ಶಿಸ್ತು, ಶ್ರದ್ಧೆ, ಆತ್ಮವಿಶ್ವಾಸದಿಂದ ನಿತ್ಯ ತಲ್ಲೀನರಾದರೆ ಅದರಿಂದ ದೊರೆಯುವ ಆನಂದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ.ಒಬ್ಬರ ಹವ್ಯಾಸ ಮತ್ತೊಬ್ಬರ ಜೀವನಕ್ಕೆ ಸ್ಫೂರ್ತಿಯಾಗಬಹುದು. ಸಮಾಜದಲ್ಲಿ ಇಂಥವರು ಸಾಕಷ್ಟು ಕಾಣಸಿಗುತ್ತಾರೆ.

**ಉದಾಹರಣೆಗೆ:** ಡಾ.ರಾಜಕುಮಾರವರು ಅಭಿನಯಿಸಿದ ಅನೇಕ ಪಾತ್ರಗಳು ನೋಡುಗರಿಗೆ ದಾರಿದೀಪವಾಗಿವೆ. ಶಿವಮೊಗ್ಗದ ದಿ. ಜಯದೇವಪ್ಪ ಜೈನಕೇರಿಯವರು ಅರವತ್ತು ವರ್ಷ ದುಡಿಮೆಯಲ್ಲಿ ತಲ್ಲೀನರಾಗಿ ನಂತರ ಹವ್ಯಾಸಕ್ಕಾಗಿ ಸಾಹಿತ್ಯ–ಓದು–ಬರಹದಲ್ಲಿ ತೊಡಗಿಸಿಕೊಂಡರು. ನಾಡಿನಾದ್ಯಾಂತ ಸಂಚರಿಸಿ ಅನೇಕ ಶಾಸನಗಳ ಸಂಶೋಧನೆ, ನೂರಾರು ಲೇಖನಗಳ ಬರವಣಿಗೆ, ಹತ್ತಾರು ಪುಸ್ತಕಗಳ ಪ್ರಕಟಣೆ, ಮಾರಾಟ, ಅನೇಕ ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದರು. ಹೊಸಪೇಟೆಯ ಶಿವಶಂಕರ ಬಣಗಾರ ಅವರು 2012ರಿಂದ ಸರಳವಾಗಿ ಫೋಟೋಗ್ರಫಿ ಆರಂಭಿಸಿ ಇಂದು ಲಕ್ಷಾಂತರ ದೃಶ್ಯಗಳನ್ನು ಸಾವಿರಾರು ವಿಧದಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳ ಪಸರಿಸಿ, ಉನ್ನತಮಟ್ಟದ ಸಾಧನೆ ಮಾಡಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವುದು ಹೆಮ್ಮೆಯ ವಿಷಯ. ಅದೇರೀತಿ ಮೈಸೂರಿನ ಮಂಜುನಾಥರವರು ವೈಯೋಲಿನ ವಾದನದಲ್ಲಿ ಅಂತರಾಷ್ಟ್ರೀಯ ಖ್ಯಾತಿ, ಸಚಿನ್ ತೇಂಡೋಲ್ಕರ್‌ರು ಕ್ರಿಕೆಟ್ನಲ್ಲಿ ಅಗಾಧವಾದ ಸಾಧನೆ, ವಿಲಾಸನಾಯಕ್‌ರು ಚಿತ್ರಕಲೆಯಲ್ಲಿ ಅಮೋಘ ಹೆಸರು, ತಿಮ್ಮಕ್ಕ ಅವರು ಸಾಲುಮರಗಳ ಪೋಷಣೆಯ ಪ್ರಕೃತಿ ಪೂಜೆಯಲ್ಲಿ ಇತರರಿಗೆ ಮಾದರಿ ಹೀಗೆ ಅನೇಕರು ತಮ್ಮ ತಮ್ಮ ಹವ್ಯಾಸಗಳಲ್ಲಿ ಮುಳುಗಿದವರು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper



ಆಧುನಿಕ ಬದುಕಿನಲ್ಲಿ ಅನೇಕರು ಹವ್ಯಾಸಗಳಿಂದಲೇ ಆತ್ಮಸಂತೋಷ ಪಡೆಯುತ್ತಾ ಅದನ್ನೇ ಜೀವನೋಪಾಯ ಮಾಡಿಕೊಂಡಿರುವವರಿದ್ದಾರೆ. ಇಂದು ಕಂಪ್ಯೂಟರ್ ಮತ್ತು ಮೊಬೈಲ್ ಕೆಲಸಗಳ ಮೂಲಕ ಹೊಸ ಹೊಸ ಶೋಧನೆಯೊಂದಿಗೆ ಪ್ರಚಾರಪ್ರಿಯರಾಗಿದ್ದಾರೆ. ಫೇಸ್ಬುಕ್, ಇನ್ಸ್ಟಾಗ್ರಾಂ, ಯುಟ್ಯೂಬ್‌ನಲ್ಲಿ ಹೊಸ ಹೊಸ ವಿಚಾರ–ವಿಷಯಗಳ ಹಾಕಿ ವೀಕ್ಷಕರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ಬದುಕಿನಲ್ಲಿ "ಹಣಕ್ಕಿಂತ ಗುಣ ಮೇಲು" ಎಂದು ನಮ್ಮ ಜನಪದರು ಹೇಳುವಂತೆ, ಮುಖ್ಯವಾಗಿ ಉತ್ತಮ ಹವ್ಯಾಸಗಳು ಮನುಷ್ಯನ ಬಾಳಿನಲ್ಲಿ ಬೆಲೆ ಕಟ್ಟಲಾರದ ಸಂತೋಷ–ಸಂಭ್ರಮ–ಸೌಹಾರ್ಧತೆಯನ್ನುಂಟು ಮಾಡುತ್ತವೆ. ಇತರರಿಗಿಂತ ವ್ಯಕ್ತಿತ್ವದಲ್ಲಿ ವಿಶೇಷತೆಯನ್ನುಂಟು ಮಾಡುತ್ತವೆ. ಹಾಗಾಗಿ ತಮ್ಮ ಮನದಲ್ಲಿ ಕಿರಿದೊರೆಯಾಗಿ ಕಾಣಿಸಿಕೊಳ್ಳುವ ಹವ್ಯಾಸಗಳನ್ನು ಅಲ್ಲಿಗೆ ಚಿವುಟಿ ಹಾಕದೇ, ಅದರಲ್ಲಿ ಇನ್ನಷ್ಟು ಆಳವಾಗಿ ಆಲೋಚಿಸಿ ಪ್ರಗತಿ ಹೊಂದಿ ಇತರರಿಗೆ ಮಾದರಿಯಾದರೆ ಜೀವನ ಸಾರ್ಥಕ ಆಗುವುದರಲ್ಲಿ ಸಂದೇಹವಿಲ್ಲ.

## ಎಸ್‌ಎಸ್‌ಎಲ್‌ಸಿ ಪ್ರಶ್ನೋತ್ತರಗಳ ಸರಣಿಗೆ ವಿದ್ಯಾರ್ಥಿಗಳ ಅನಿಸಿಕೆಗಳು

### ಘೋಷವಾಕ್ಯವೇ ನಮಗೆ ಸ್ಫೂರ್ತಿಯಾಗಿದೆ



**'ಹಂಪಿ ಟೈಮ್ಸ್'** ಪತ್ರಿಕೆಯು ಎಸ್.ಎಸ್.ಎಲ್.ಸಿ ಮಕ್ಕಳಿಗೆ ನೀಡುತ್ತಿರುವ ಪ್ರಶ್ನೋತ್ತರ ಮಾಲಿಕೆಯು ತುಂಬಾ ಸಹಾಯಕವಾಗಿದೆ. ಅದರಲ್ಲೂ **'ಈ ಬಾರಿ ಫಲಿತಾಂಶ ನಮ್ಮದೇ'** ಎಂಬ ಘೋಷವಾಕ್ಯವು ನಮಗೆ ಸ್ಫೂರ್ತಿಯಾಗಿದೆ. ಉತ್ತಮ ಫಲಿತಾಂಶ ಪಡೆಯಲು ಪ್ರೇರಣೆಯಾಗಿದೆ. ಪ್ರತಿದಿನವೂ ನಮಗೆ ಉತ್ತಮ ಮಾಹಿತಿ ನೀಡುತ್ತಿರುವ ಪತ್ರಿಕೆಗೆ ಹಾಗೂ ಪ್ರಶ್ನೋತ್ತರ ಗಳನ್ನು ಬರೆದುಕೊಡುವ ಶಿಕ್ಷಕರಿಗೆ ನನ್ನ ನಮಸ್ಕಾರಗಳು.

**– ಆಫ್ರಿನ್. 10ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

**ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ನಿಮ್ಮ ಅಭಿಪ್ರಾಯಗಳನ್ನು ಭಾವಚಿತ್ರದೊಂದಿಗೆ ಕಳುಹಿಸಬಹುದು.**
M: 9448633038 - Email: hampitimes@gmail.com

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

HAMPI TIMES VIJAYANAGARA


ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ


### ದಸರಾ ರಜಾ ಅವಧಿಯ ಅಭ್ಯಾಸ ಮಾಲಿಕೆ –1

**ಈ ಕೆಳಗಿನ ಚಿತ್ರಗಳನ್ನು ದಿನಕ್ಕೆ ಒಂದರಂತೆ ಅಭ್ಯಾಸ ಮಾಡಿ.**


1. ನೀರಿನ ವಿದ್ಯುತ್ ವಿಭಜನೆ (ಚಿತ್ರ 1.6)





2. ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ. (ಚಿತ್ರ 2.1)





3. ತೆರೆದ ಮತ್ತು ಮುಚ್ಚಿದ ಪತ್ರರಂಧ್ರ (ಚಿತ್ರ 5.3 (a),(b))





4. ಮನುಷ್ಯನ ಹೃದಯದ ಛೇದ ನೋಟ (5.10)





5. ನೆಫ್ರಾನ್ ನ ರಚನೆ (ಚಿತ್ರ 5.14)





6. ಮಾನವನ ಮಿದುಳು (ಚಿತ್ರ 6.3)





7. ಸರಳ ವಿದ್ಯುನ್ಮಂಡಲದ ರೇಖಾಚಿತ್ರ (ಚಿತ್ರ 11.1)




8. ಸರಣಿ ಕ್ರಮದಲ್ಲಿರುವ ಮತ್ತು ಸಮಾಂತರವಾಗಿರುವ ರೋಧಕಗಳು (ಚಿತ್ರ 11.6 & ಚಿತ್ರ 11.7)




9. ಒಂದು ನೇರವಾದ ವಾಹಕ ತಂತಿಯ ಸುತ್ತ ಕಾಂತೀಯ ಬಲ ರೇಖೆಗಳನ್ನು ಸೂಚಿಸುವ ಏಕಕೇಂದ್ರೀಯ ವೃತ್ತಗಳ ಮಾದರಿ. (ಚಿತ್ರ 12.6 (a))




www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಪಿ. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

# ಹೃದಯ ಖಾಯಿಲೆಗೆ ನಿರ್ಲಕ್ಷ್ಯ ಮಾಡದೇ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಿರಿ

## ಡಿಹೆಚ್‌ಓ ಡಾ.ಯಲ್ಲಾ ರಮೇಶಬಾಬು ಹೇಳಿಕೆ | ವಿಶ್ವ ಹೃದಯ ದಿನಾಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಹೃದಯ ಸಂಬಂಧಿತ ಯಾವುದೇ ಖಾಯಿಲೆಗಳಿಗೆ ನಿರ್ಲಕ್ಷ್ಯ ಮಾಡದೇ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಘಟಕ ಸಹಯೋಗದಲ್ಲಿ ಕೌಲ್‌ಬಜಾರ್‌ನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಹೃದಯ ದಿನ ಹಾಗೂ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ಬುಧವಾರ ಆಯೋಜಿಸಿದ್ದ ಜಾಗೃತಿ ಹಾಗೂ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹೃದಯಾಘಾತವಾಗುವುದು ಒಂದು ಭಯಾನಕ ಅನುಭವ. ಜೀವಕ್ಕೆ ಅಪಾಯಕಾರಿಯೂ ಹೌದು, ದೈನಂದಿನ ಒತ್ತಡದ ಜೀವನಶೈಲಿಯಲ್ಲಿ ಬದಲಾವಣೆಯೊಂದಿಗೆ ಮಾನಸಿಕ ಒತ್ತಡವನ್ನು ಸೂಕ್ತವಾಗಿ ನಿಭಾಯಿಸುವ ಜೊತೆಗೆ ನಿಯಮಿತ ವ್ಯಾಯಾಮಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.



**ಉಚಿತ ಆರೋಗ್ಯ ತಪಾಸಣೆ:**
ಮಹಾನಗರಪಾಲಿಕೆ ಉಪಮೇಯರ್ ಡಿ.ಸುಕುಂ ಅವರು ಉಚಿತ ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿದರು. ನಂತರ ಕೌಲ್‌ಬಜಾರ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ನರಸಿಂಹಮೂರ್ತಿ ಹಾಗೂ ಜಿಲ್ಲಾ ಆಸ್ಪತ್ರೆಯ ಫಿಜಿಷಿಯನ್ ಡಾ.ಜ್ಞಾನ ಅಭಿಲಾಷ್ ಅವರ ನೇತೃತ್ವದಲ್ಲಿ ಜಿಲ್ಲಾ ಎನ್‌ಸಿಡಿ ಘಟಕದ ತಂಡವು 101 ಜನರ ಪರೀಕ್ಷೆ ಮಾಡಲಾಗಿ, ಇವರಲ್ಲಿ ಹೊಸದಾಗಿ 09 ರಕ್ತದೊತ್ತಡ, 01 ಸಕ್ಕರೆ ಕಾಯಿಲೆ ಇರುವವರು ಪತ್ತೆಯಾಗಿದ್ದು, 02 ಜನರಿಗೆ ಇಸಿಜಿ ಪರೀಕ್ಷೆಗಳನ್ನು ಕೈಗೊಳ್ಳಲಾಯಿತು.

ಕುಟುಂಬದ ಸದಸ್ಯರಲ್ಲಿ ಹೃದಯ ಸಂಬಂಧಿತ ಖಾಯಿಲೆಗಳಿದ್ದರೆ ಅಥವಾ ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ, ನಿರಂತರ ಧೂಮಪಾನ, ಅಧಿಕ ಬೊಜ್ಜು, ಮಧ್ಯಸೇವನೆ, ಹೈ ಕೊಲೆಸ್ಟ್ರಾಲ್ ಇದ್ದಲ್ಲಿ ಹೃದಯ ಸಂಬಂಧಿತ ಕಾಯಿಲೆಗೆ ಬೇಗನೆ ತುತ್ತಾಗಬಹುದು. ಹಾಗಾಗಿ ಕನಿಷ್ಠ 30 ನಿಮಿಷಗಳ ಸರಳ ವ್ಯಾಯಾಮ, ಆಹಾರದಲ್ಲಿ ಕಡಿಮೆ ಕೊಬ್ಬಿನಾಂಶ ಬಳಸಬೇಕು. ಧ್ಯಾನ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಒಳ್ಳೆಯದು ಎಂದು ಅವರು ತಿಳಿಸಿದರು.

ಒಂದು ವೇಳೆ ವೈದ್ಯರು ಸೂಚಿಸಿದಲ್ಲಿ ನಿಯಮಿತ ಔಷಧಿ ಸೇವನೆಯೊಂದಿಗೆ ಸದಾ ಲವಲವಿಕೆಯಿಂದ ಇರುವ ಮೂಲಕ ಕಾಯಿಲೆ ದೂರಗೊಳಿಸಬಹುದಾಗಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ >>4

ಮೈಕ್ರೋ ನ್ಯೂಸ್

## ವಿಜಯನಗರ ಜಿಲ್ಲೆಯಲ್ಲಿ ಸಹಕಾರ ಸಚಿವರ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಅಕ್ಟೋಬರ್ 04, ಅ.05 ಮತ್ತು ಅ.06ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸಕಾರ್ಯಕ್ರಮವನ್ನುಹಮ್ಮಿಕೊಂಡಿದ್ದಾರೆ. ಸಚಿವರು ಅಕ್ಟೋಬರ್ 04ರಂದು ಗದಗ ಜಿಲ್ಲೆಯ ರೋಣಾ ತಾಲ್ಲೂಕಿನ ಅಬ್ಬಿಗೇರಿಯಿಂದ ನಿರ್ಗಮಿಸಿ, ರಸ್ತೆ ಮಾರ್ಗವಾಗಿ ಸಂಜೆ 05.30ಕ್ಕೆ ಹೊಸಪೇಟೆಗೆ ಆಗಮಿಸಿ ವಾಸ್ತವ್ಯ ಹೂಡುವರು. ಅ.05ರಂದು ಬೆಳಿಗ್ಗೆ 10.30ಕ್ಕೆ ಹೊಸಪೇಟೆ ನಗರದಲ್ಲಿರುವ ಬಳ್ಳಾರಿ ಡಿ.ಸಿ.ಸಿ ಬ್ಯಾಂಕ್‌ನ ಕೆಲಸ ಕಾರ್ಯಗಳ ಪರಿಶೀಲನೆ ಮತ್ತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 12.30ಕ್ಕೆ ಬಳ್ಳಾರಿ ಡಿ.ಸಿ.ಸಿ ಬ್ಯಾಂಕ್ ಸಭಾಂಗಣದಲ್ಲಿ ರೈತರ ಕ್ಷೇಮಾಭಿವೃದ್ಧಿ ಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಬಳಿಕ ಅಂದು ಹೊಸಪೇಟೆಯಲ್ಲಿ ವಾಸ್ತವ್ಯ ಮಾಡುವರು. ಅ.06ರಂದು ಬೆಳಿಗ್ಗೆ 10.30 ಗಂಟೆಗೆ ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆಯುವ ನಾಗೇನಹಳ್ಳಿಯ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಅಂದು ಮಧ್ಯಾಹ್ನ 02.30ಕ್ಕೆ ಹೊಸಪೇಟೆಯಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ತಿಳಿದ್ದಾರೆ.

## ಹೃದಯ ಖಾಯಿಲೆಗೆ ನಿರ್ಲಕ್ಷ್ಯ ಮಾಡದೇ ಚಿಕಿತ್ಸೆ ಪಡೆಯಿರಿ

**ಮೂರನೇ ಮುದಿಂದ**

ಡಾ.ಮರಿಯಂಬಿ.ವಿ.ಕೆ ಅವರು ಮಾತನಾಡಿ, ಹೃದಯ ಸಂಬಂಧಿತ ಕಾಯಿಲೆಗಳ ಜೊತೆ ಜೊತೆಗೆ ಹಿರಿಯ ನಾಗರಿಕರ ಆರೈಕೆಯು ಮುಖ್ಯವಾಗಿದ್ದು, ಸಾಮಾನ್ಯವಾಗಿ ವಯಸ್ಸಾದಂತೆ ಕಣ್ಣಿನಪೊರೆ, ಕಿವುಡುತನ, ಅಧಿಕ ರಕ್ತದೊತ್ತಡ, ಖಿನ್ನತೆ, ನರದೌರ್ಬಲ್ಯ ರೋಗ, ದೇಹದ ಭಂಗಿಯಲ್ಲಿ ಅಸ್ಥಿರತೆ, ಮಲಬದ್ಧತೆ ಕಾಣಿಸಿಕೊಳ್ಳುವುದು ಸಹಜವಾಗಿದೆ ಎಂದರು. ಇದಕ್ಕಾಗಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ವಿಶೇಷ ಕ್ಲಿನಿಕ್ ಸೇವೆಯನ್ನು ಜಿಲ್ಲಾ ಅಸ್ಪತ್ರೆ, ತಾಲೂಕಾ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುವುದು. ಈ ಸಂದರ್ಭದಲ್ಲಿ ಪಿಸಿಯೋಥೆರಪಿ ಹಾಗೂ ಪೋಷಕರೊಂದಿಗೆ ಆಪ್ತಸಮಾಲೋಚನೆ ಮಾಡಲಾಗುವುದು, ಗ್ರಾಮೀಣ ಪ್ರದೇಶಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಸಹ ನೀಡಲಾಗುವ ಪ್ರಾಥಮಿಕ ಹಂತದ ಸೇವೆಗಳನ್ನು ಪಡೆಯಬೇಕು ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಆಡಳಿತ ವೈದ್ಯಾಧಿಕಾರಿ ಡಾ.ನರಸಿಂಹಮೂರ್ತಿ, ತಜ್ಞವೈದ್ಯರಾದ ಡಾ. ಜ್ಞಾನ ಅಭಿಲಾಷ್, ಡಾ.ರಹೀಮಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಎನ್‌ಬಿಸಿ ಜಿಲ್ಲಾ ಸಲಹೆಗಾರ ಡಾ.ಜಬೀನಾ ತಾಜ್, ಪ್ರಶಾಂತ್, ಸಿಬ್ಬಂದಿಯ ಡಿ.ಸುನೀತಾ, ಅರುಣ್‌ಕುಮಾರ್, ರವೀಂದ್ರರೆಡ್ಡಿ, ಗಂಗಾ ಭವಾನಿ, ರುಕ್ಮಿಣಿ, ರೇಖಾ, ಹೊನ್ನುರಮ್ಮ, ಈಶ್ವರಮ್ಮ, ಚಂದ್ರ ನಾಯ್ಕ್, ಅನುಶ್ರೀ ಸೇರಿದಂತೆ ಇತರರು ಇದ್ದರು.

## ಸಚಿವ ವಿ.ಸೋಮಣ್ಣ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಜಲ ಶಕ್ತಿ ಮತ್ತು ರೇಲ್ವೆ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ ಅವರು ಅ.06 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.



ಅ.06 ರಂದು ಬೆಳಿಗ್ಗೆ 05.50 ಗಂಟೆಗೆ ಬಳ್ಳಾರಿಗೆ ಆಗಮಿಸುವರು. ಬಳಿಕ ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ರೈಲ್ವೇ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಭೆ ನಡೆಸುವರು.

ನಂತರ ಮಧ್ಯಾಹ್ನ 02 ಗಂಟೆಗೆ ಬಳ್ಳಾರಿಯಿಂದ ಹೊರಟು, ಮಧ್ಯಾಹ್ನ 03 ಗಂಟೆಗೆ ಸಿರುಗುಪ್ಪ ತಾಲ್ಲೂಕಿನ ಸಿರಿಗೇರಿ ಗ್ರಾಮದಲ್ಲಿ ನಾಗನಾಥೇಶ್ವರ ದೇವಾಲಯ ಆವರಣದಲ್ಲಿ ಏರ್ಪಡಿಸಲಾದ ಡಾ.ಶ್ರೀ ಶ್ರೀ ಶಿವಕುಮಾರ ಸ್ವಾಮಿಜೀ ಸಿದ್ದಗಂಗಾ ಆಧಾರಿತ ಸಾಕ್ಷ್ಯ ಚಿತ್ರ ಬಿಡುಗಡೆಕಾರ್ಯಕ್ರಮದಲ್ಲಿಭಾಗವಹಿಸುವರು. ಬಳಿಕ ರಾತ್ರಿ 10.55 ಗಂಟೆಗೆ ರೈಲ್ವೇ ಮೂಲಕ ಬೆಂಗಳೂರಿಗೆ ಪ್ರಯಾಣಿಸು ವರು ಎಂದು ಸಚಿವರ ಸಹಾಯಕ ಆಪ್ತ ಕಾರ್ಯದರ್ಶಿಯವರು ತಿಳಿಸಿದ್ದಾರೆ.

# ಹಂಪಿಯಲ್ಲಿ ಶಕ್ತಿ ದೇವತೆಗಳ ಆರಾಧನೆ

ಯುದ್ದಕ್ಕೂ ಮುನ್ನ ದರ್ಶನ, ಅಪ್ಪಣೆ ಪಡೆಯುತ್ತಿದ್ದ ಅರಸರು

## ಹಂಪಿಯ ಪಟ್ಟಣದ ಎಲ್ಲಮ್ಮ

ಹಂಪಿ ಶಕ್ತಿ ದೇವತೆಗಳ ಆಚರಣೆ ಕಂಡು ಬೆರಗಾಗಿದ್ದ ವಿದೇಶಿಗರು

ಪ್ರಾಚೀನ ಕಾಲದಿಂದ ಇವತ್ತಿನ ತನಕ ಹಂಪಿ ಪ್ರದೇಶವು ಹಲವಾರು ಶಕ್ತಿ ದೇವತೆಗಳ ಆರಾಧನಾ ಕ್ಷೇತ್ರವಾಗಿದೆ. ಪಾರ್ವತಿ ದೇವಿ ಅಥವಾ ಪಂಪಾಂಬಿಕೆಯಿಂದ ಶಕ್ತಿ ದೇವತೆಗಳ ಪರಂಪರೆ ಆರಂಭಗೊಳ್ಳುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಈ ಶಕ್ತಿ ದೇವತೆಗಳ ಆರಾಧನೆಯು ಮುಂದುವರಿಯುತ್ತದೆ. ವಿಶೇಷವಾಗಿ ವಿಜಯನಗರದ ಸಾಮ್ರಾಜ್ಯದ ದೊರೆಗಳು ಪಟ್ಟಣದ ಎಲ್ಲಮ್ಮನನ್ನು ಪೂಜಿಸಿದ್ದು, ಆರಾಧಿಸಿದ ಬಗ್ಗೆ ಚರಿತ್ರೆ ಇದೆ. ಹಾಗಾಗಿ ವಿಜಯನಗರ ಸಾಮ್ರಾಜ್ಯದಿಂದ ಈ ಹೊತ್ತಿನ ದಸರಾ ಆಚರಣೆಯ ತನಕ ಹಂಪಿಯ ಪಟ್ಟಣದ ಎಲ್ಲಮ್ಮ ಶಕ್ತಿ ದೇವತೆಯಾಗಿ, ಜನಸಾಮಾನ್ಯರ ಆರಾಧ್ಯ ದೇವತೆಯಾಗಿ ಪೂಜೆಗೊಳ್ಳುತ್ತಿದ್ದಾಳೆ.

ಹಂಪಿಯ ಹಜಾರ ರಾಮ ದೇವಸ್ಥಾನದ ಪಾನ್ ಸುಪಾರಿ ಬಜಾರದಲ್ಲಿ ಈ ದೇವಸ್ಥಾನವಿದೆ. ಹಂಪಿಯ ನೆಲದಲ್ಲಿ ಪೂಜೆ ಗೊಳ್ಳುವ ಕೆಲವೇ ದೇವಸ್ಥಾನಗಳಲ್ಲಿ ಇದು ಸಹ ಮುಖ್ಯವಾಗಿದೆ. ವಿಜಯನಗರದ ಅರಸರ ಅರಮನೆ ಆವರಣಕ್ಕೆ ಸಮೀಪದಲ್ಲಿ ಇರುವ ಈ ದೇವತೆ, ರಾಜರ ಅರಮನೆ ದೇವತೆಯಾಗಿದ್ದಳು ಎನ್ನುತ್ತಾರೆ. ಈ ದೇವಸ್ಥಾನ ದಕ್ಷಿಣ ಅಭಿಮುಖವಾಗಿದ್ದು,



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489
Scan For Digital Colourful
HAMPI TIMES E-paper

ನೆಲಮಟ್ಟದಿಂದ ಕೆಳಭಾಗದಲ್ಲಿದ್ದು ದೇವಸ್ಥಾನದ ಮೇಲ್ಛಾವಣಿ ನೆಲಮಟ್ಟಕ್ಕೆ ಸಮಾನವಾಗಿ ಕಾಣಿಸುತ್ತದೆ.ಗುಡಿಗೆ ಮೇಲಿಂದ ಇಳಿದು ಪ್ರವೇಶಿಸಬೇಕಾಗುತ್ತದೆ. ಈ ದೇವಸ್ಥಾನವು ಗರ್ಭಗುಡಿಯನ್ನು ಹೊಂದಿದ್ದು ಗರ್ಭಗುಡಿಯಲ್ಲಿ ಸಿಂಹದ ಮೇಲೆ ಕುಳಿತ ಬಂಗಿಯಲ್ಲಿ ಈ ದೇವತೆಯ ಮೂರ್ತಿ ಇದೆ. ಇದು ಸುಮಾರು 6 ಅಡಿ ಎತ್ತರವಿದ್ದು ದೇವತೆ ನಾಲ್ಕು ಕೈಗಳನ್ನು ಹೊಂದಿದ್ದಾಳೆ. ಬಲಭಾಗದ ಕೈಗಳಲ್ಲಿ ಡಮರುಗ ಮತ್ತು ಖಡ್ಗ ಹಿಡಿದಿದ್ದಾಳೆ. ಎಡ ಭಾಗದ ಕೈಗಳಲ್ಲಿ ತ್ರಿಶೂಲ ಮತ್ತು ಕಪಾಲ ಹಿಡಿದಿದ್ದಾಳೆ .ದೇವಿಯ ಕೊರಳಿನಲ್ಲಿ ರುಂಡಮಾಲೆ ಇದೆ.

ವಿಜಯನಗರ ಸಾಮ್ರಾಜ್ಯಕ್ಕಿಂತ ಪೂರ್ವದಲ್ಲಿ ಪಟ್ಟಣದ ಎಲ್ಲಮ್ಮ ಗ್ರಾಮ ದೇವತೆಯಾಗಿದ್ದು ಜನಸಮುದಾಯದ



ದೇವತೆಯಾಗಿದ್ದವಳು. ನಂತರ ವಿಜಯನಗರದ ಅರಸರ ದೇವತೆಯಾಗಿ ರಾಜಮನ್ನಣೆ ಪಡೆದುಕೊಳ್ಳುತ್ತಾಳೆ. ನಂತರ ವಿಜಯನಗರ ಸಾಮ್ರಾಜ್ಯದಲ್ಲಿ ಇಲ್ಲಿ ಪಟ್ಟಣ ನಿರ್ಮಾಣವಾದ್ದರಿಂದ ಈಕೆಯನ್ನು ಪಟ್ಟಣದ ಎಲ್ಲಮ್ಮ ಎಂಬ ಹೆಸರಿನಿಂದ ಕರೆಯಲಾಯಿತು ಎನ್ನುತ್ತಾರೆ. ವರವನ್ನು ಬೇಡಿ ಬಂದ ಭಕ್ತರನೆಲ್ಲ ರಕ್ಷಿಸಿದ್ದರಿಂದ ಎಲ್ಲರ ಅಮ್ಮ ಎಲ್ಲಮ್ಮ ಆಗಿರಬಹುದು ಸಹ ಎನ್ನುತ್ತಾರೆ.

ಎಲ್ಲಮ್ಮ ವಿಜಯನಗರದ ಅರಸರ ಯುದ್ಧ ದೇವತೆಯಾಗಿದ್ದಳು. ವಿಜಯನಗರದ ಸೈನ್ಯ ಯುದ್ಧಕ್ಕೆ ಹೊರಡುವ ಮುನ್ನ ಈ ದೇವತೆಯ ದರ್ಶನ, ಅಪ್ಪಣೆ ಪಡೆದು ವಿಜಯ ತಾಂಬೂಲ ಪಡೆದುಕೊಂಡು ಯುದ್ಧಕ್ಕೆ ಹೊರಡುತ್ತಿದ್ದರು ಎನ್ನುತ್ತಾರೆ. ಯುದ್ಧಕ್ಕೆ ಹೊರಡುವ ಸಂಬಂಧದಲ್ಲಿ ಯೋಧರಿಗೆ ತಿಲಕವನ್ನಿಟ್ಟು ಯುದ್ಧದಲ್ಲಿ ಜಯಶಾಲಿಗಳಾಗಿ ಬನ್ನಿ ಎಂದು ಹರಸುತ್ತಿದ್ದರು ಎಂಬ ಸಂಗತಿಗಳು ಜನಪದ ಹಾಡುಗಳಿಂದ ದೊರೆಯುತ್ತಿವೆ. ವಿಜಯನಗರದ ಸೈನ್ಯದಲ್ಲಿ ಇದ್ದ ಸೈನಿಕರ ಮನೆ ದೇವತೆ ಈ ದೇವತೆಯೇ ಆಗಿರಬೇಕು ಎನ್ನುತ್ತಾರೆ. ಸಾಮ್ರಾಜ್ಯದ ವಿಸ್ತರಣೆಗೆ ಸೈನಿಕರು ಮತ್ತು ಸೈನ್ಯದ ಬಲಕ್ಕೆ ದೇವತೆಯ ಕೃಪೆ ಬಲ ಇರಬೇಕೆಂದು ಅರಸರು ಈ ದೇವತೆಗೆ ಬೇಡಿಕೊಳ್ಳುತ್ತಿದ್ದರಂತೆ.

ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಭೇಟಿ ಕೊಟ್ಟ ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ನಿಕ್ಕಲೊ ಕೌಂಟಿ, ಡೊಮ್ಮಿಂಗ ಪಿಯಾಸ್, ಇವರು ತಮ್ಮ ದಿನಚರಿಯಲ್ಲಿ ಈ ದೇವಸ್ಥಾನದ ಬಗ್ಗೆ, ಆಚರಣೆಗಳ ಬಗ್ಗೆ ದಾಖಲಿಸಿದ್ದಾರೆ. ಈ ದೇವಸ್ಥಾನದಲ್ಲಿ ನಿತ್ಯವು ಪ್ರಾಣಿ ಬಲಿ ನಡೆಯುತ್ತಿತ್ತು ಎಂದು, ಗುಡಿಯ ಬಾಗಿಲಲ್ಲಿ ಅನೇಕ ಕುರಿಗಳನ್ನು ಬಲಿ ಕೊಡುತ್ತಿದ್ದರು ಎಂದು ಪಿಯಾಸ್ ದಾಖಲಿಸಿದ್ದಾನೆ.

ನವರಾತ್ರಿಯ ಸಂದರ್ಭದಲ್ಲಿ ದೇವಿಯ ರಥೋತ್ಸವ ನಡೆಯುತ್ತಿತ್ತು ಇದಕ್ಕಾಗಿ ಪ್ರಾಣಿಗಳನ್ನು ಬಲಿಕೊಟ್ಟು ನೈವೇದ್ಯವನ್ನು ಮಾಡಲಾಗುತ್ತಿತ್ತು. ಈ ವಿಜಯೋತ್ಸವ 9 ದಿನಗಳ ಕಾಲ ನಡೆದು ಮೊದಲ ಹಾಗೂ ಕೊನೆಯ ದಿನಗಳಲ್ಲಿ ಪ್ರಾಣಿಗಳನ್ನು ಬಲಿ ಕೊಡಲಾಗುತ್ತಿತ್ತು ಎನ್ನುವುದನ್ನು ವಿದೇಶಿ ಪ್ರವಾಸಿಗ ದಾಖಲಿಸಿದ್ದಾನೆ. ವಿಜಯೋತ್ಸವದಲ್ಲಿ ರಾಜರು, ಸಾಮಂತರು ಮೊದಲಾದವರು ಪಾಲ್ಗೊಳ್ಳುತ್ತಿದ್ದರು ಎಂದಿದ್ದಾನೆ. ರಥೋತ್ಸವಕ್ಕೆ ಹರಕೆ ಹೊತ್ತ ಭಕ್ತರು ರಥೋತ್ಸವದ ಗಾಲಿಗೆ ತಮ್ಮನ್ನು ಅರ್ಪಿಸಿಕೊಂಡು ಬಲಿಯಾಗುತ್ತಿದ್ದರು, ಎನ್ನುವುದನ್ನು ಮತ್ತೊಬ್ಬ ವಿದೇಶಿ ಪ್ರವಾಸಿಗ ನಿಕೋಲೋ ಕೊಂತಿ ಬರೆಯುತ್ತಾನೆ . ಹೀಗೆ ಪಟ್ಟಣದ ಎಲ್ಲಮ್ಮ ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ವಿಜೃಂಭಣೆಯಿಂದ ಪೂಜೆ, ಆರಾಧನೆ ನಡೆಯುತ್ತಿತ್ತು ಎನ್ನುವುದನ್ನು ಅಧ್ಯಯನದ ಮೂಲಕ ತಿಳಿಯಬಹುದಾಗಿದೆ. ನಮ್ಮ ಕಾಲಘಟ್ಟದಲ್ಲಿ ಈ ದೇವಿಯ ಆರಾಧನೆ ಪೂಜಾ ಕಾರ್ಯಗಳು ಈಗಲೂ ನಡೆದು ಕೊಂಡು ಬಂದು ಭಕ್ತರು ಭಕ್ತಿಗಳಿಂದ ಶ್ರದ್ದೇಗಳಿಂದ ದೇವಿಗೆ ನಡೆದುಕೊಳ್ಳುತ್ತಿದ್ದಾರೆ ಹೀಗಾಗಿ ಹಂಪಿಯ ಶಕ್ತಿ ದೇವತೆಗಳಲ್ಲಿ ಪಟ್ಟಣದ ಎಲ್ಲಮ್ಮ ಸಹ ಪ್ರಮುಖವಾದ ಶಕ್ತಿ ದೇವತೆಯಾಗಿದ್ದಾಳೆ.




ಬಳ್ಳಾರಿಯ ಶ್ರೀ ದುರ್ಗಾದೇವಿಗೆ ನವರಾತ್ರಿ ಮೊದಲ ದಿನ ವಿಶೇಷ ಪೂಜೆ



ಹೊಸಪೇಟೆ ಒಡಕರಾಯ ದೇವಸ್ಥಾನದಲ್ಲಿರುವ ಅಮ್ಮನಿಗೆ ಅರಿಶಿಣ ಅಲಂಕಾರ ಪೂಜೆ



ಹೊಸಪೇಟೆಯ ಬಳ್ಳಾರಿ ರಸ್ತೆ ಅಂಭಾಭವಾನಿ ದೇವಿಗೆ ವಿಶೇಷ ಪೂಜೆ



ಹೊಸಪೇಟೆ ಮೇದಾರ ಓಣಿಯ ಶ್ರೀ ಬನ್ನಿ ಮಹಾಂಕಾಳಿ ದೇವಿಗೆ ನವರಾತ್ರಿ ಪೂಜೆ

# ಉತ್ತಮ ಆರೋಗ್ಯ, ಸದೃಡ ದೇಹಕ್ಕೆ ಪೌಷ್ಟಿಕ ಆಹಾರ ಸೇವನೆ ಅಗತ್ಯ

**ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಎಂ.ಶಿವಣ್ಣ ಹೇಳಿಕೆ | ಪೌಷ್ಟಿಕ ಆಹಾರ ಮೇಳ ಕಾರ್ಯಕ್ರಮ**

**ಹಂಪಿ ಟೈಮ್ಸ್ ಕೊಟ್ಟೂರು**

ಉತ್ತಮ ಆರೋಗ್ಯ, ಸದೃಢ ದೇಹ ನಿರ್ಮಾಣ ಹಾಗೂ ಬೌದ್ಧಿಕ ವಿಕಾಸಕ್ಕೆ ಕುಟುಂಬದಲ್ಲಿ ಪೌಷ್ಟಿಕಾಹಾರ ಸೇವನೆ ಅತ್ಯಂತ ಅವಶ್ಯಕ ಎಂದು ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಎಂ.ಶಿವಣ್ಣ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೊಟ್ಟೂರು ತಾಲೂಕಿನ ಮೊರಬ ವಲಯದ 'ಮೊರಬ ಕನಸು "ಜ್ಞಾನ ವಿಕಾಸ ಕೇಂದ್ರದಲ್ಲಿ ಆಯೋಜಿಸಿದ ಪೌಷ್ಟಿಕ ಆಹಾರ ಮೇಳ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಗಳು ಡಾಕ್ಟರ ಪಲ್ಲವಿ ಮಾತನಾಡಿ ಕುಟುಂಬ ಆರ್ಥಿಕವಾಗಿ ಬಲಿಷ್ಠಗೊಳ್ಳಲು ಮುಖ್ಯವಾಗಿ ಮನೆಯಲ್ಲಿ ಸಿರಿಧಾನ್ಯ ಹೆಚ್ಚಾಗಿ ಬಳಕೆ ಮಾಡಬೇಕು,ಇದರಿಂದ ಕುಟುಂಬದ ಪ್ರತಿಯೊಬ್ಬ ಸದಸ್ಯರು ಆರೋಗ್ಯದಿಂದಿದ್ದು, ಆಸ್ಪತ್ರೆಗೆ ತಗಲುವ ವೆಚ್ಚ ಕಡಿತಗೊಳ್ಳಿಸಬಹುದು, ಇದರಿಂದ ಮನೆಯ ಆರ್ಥಿಕ ವ್ಯವಸ್ಥೆ ತನ್ನಷ್ಟಕ್ಕೇ ತಾನೇ ಸುಧಾರಿಸುತ್ತೆ ಜತೆಗೆ



ಸದೃಢಗೊಳ್ಳುತ್ತೆ. ಇತ್ತೀಚೆಗೆ ಹೆಚ್ಚಿನ ಮಹಿಳೆಯರು ನಿತ್ಯದ ಬದುಕಿನ ಜಂಜಾಟದಲ್ಲಿ ಸಮಯಕ್ಕೆ ಸರಿಯಾಗಿ ಊಟ ಮಾಡದೆ,ರಕ್ತಹೀನತೆ,ರುತುಚಕ್ರ ಸಮಸ್ಯೆ ಸೇರಿದಂತೆ ನಾನ ರೀತಿಯ ಸಮಸ್ಯೆಯಿಂದ ಬಳಲುತ್ತಿದ್ದಾರೆ.ಈ ಬಗ್ಗೆ ಮಹಿಳೆಯರು ಎಚ್ಚರಿಕೆ ವಹಿಸಬೇಕು.

ಗರ್ಭಿಣಿಯರು ಸಮಯಕ್ಕೆ ಸರಿಯಾಗಿ ಆಹಾರ ಸೇವಿಸಿ ಅದರಲ್ಲೂ ಪೌಷ್ಟಿಕಾಹಾರಗಳನ್ನೇ ಹೆಚ್ಚಾಗಿ ಸೇವಿಸಿ ಇದರಿಂದ, ಗರ್ಭಧಾರಣೆ ಸಮಯದಲ್ಲಿ ಕಾಡಬಹುದಾದ ಸಮಸ್ಯಗಳಿಂದ ಮುಕ್ತರಾಗಿರಬಹುದು,ಜತೆಗೆ ಹುಟ್ಟುವ ಮಕ್ಕಳು ಪೌಷ್ಟಿಕತೆಯಿಂದ ಸದೃಡವಾಗಿರುತ್ತವೆ ಎಂದುರು.

ಕಾರ್ಯಕ್ರಮದಲ್ಲಿ ಸದಸ್ಯರು ವಿವಿಧ ಪೌಷ್ಟಿಕ ಆಹಾರವನ್ನು ತಯಾರಿ ಮಾಡಿಕೊಂಡು ಬಂದಿದ್ದರು ಹಾಗೆ ತಮ್ಮ ಮನೆಯಲ್ಲಿ ಪೌಷ್ಟಿಕ ಆಹಾರ ಬಳಕೆಯಿಂದ ಲಭಿಸಿದ ಲಾಭದ ಬಗ್ಗೆ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಈ ವೇಳೆ ಜ್ಞಾನವಿಕಾಸ ಸಮನ್ವಯ ಅಧಿಕಾರಿ ಸೌಮ್ಯ, ಸೇವಾಪ್ರತಿನಿಧಿ ಪ್ರಮೀಳಾ, ಜ್ಞಾನ ವಿಕಾಸ ಕೇಂದ್ರ ಸದಸ್ಯರು ಉಪಸ್ಥಿತರಿದ್ದರು.

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಂದ 2024-25ನೇ ಸಾಲಿಗೆ ಮೆಟ್ರಿಕ್ ನಂತರದ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ) ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಕ್ಟೋಬರ್ 30 ಕೊನೆಯ ದಿನಾಂಕವಾಗಿದ್ದು, ಹೊಸದಾಗಿ ಪ್ರವೇಶ ಬಯಸುವ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ ಪ್ರವರ್ಗ-1 ಎಸ್.ಸಿ ಮತ್ತು ಎಸ್.ಟಿ ರೂ.2.50 ಲಕ್ಷ, ಪ್ರವರ್ಗ 2ಎ, 2ಬಿ, 3ಎ,3 ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ರೂ.1.00 ಲಕ್ಷಕ್ಕೆ ಮೀರಿರಬಾರದು.

ಹೊಸ ಅರ್ಜಿಗಳನ್ನು ನವಂಬರ್ 5ರೊಳಗಾಗಿ ತಾಲೂಕ ಕಲ್ಯಾಣಾಧಿಕಾರಿಗಳು ಪರಿಶೀಲನೆ ಮಾಡುವರು. ತಾಲೂಕ ಸಮಿತಿಯ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಆಯ್ಕೆಪಟ್ಟಿ ನ.8ಕ್ಕೆ ಪ್ರಕಟಣೆ, ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯಲು ನ.11 ಅಂತಿಮ ದಿನವಾಗಿರುತ್ತದೆ. ವಿದ್ಯಾರ್ಥಿಗಳು ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಇ-ಮೇಲ್ bcwdhelpline@gmail.com ಮುಖಾಂತರ ಅಥವಾ ಜಿಲ್ಲಾ, ತಾಲ್ಲೂಕ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು. ಸಹಾಯವಾಣಿ ಸಂಖ್ಯೆ; 8050770004 ಮತ್ತು 8050770005ಗೆ ಕರೆ ಮಾಡಬಹುದು ಎಂದು ವಿಜಯನಗರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055